
ಅಚಲ

ನವೆಂಬರ್ 8, 1989 ಬೆಲೆ: ರೂ. 1-50

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರದ ದ್ವೈಮಾಸಿಕ



ಸಂಪುಟ ೫ ಸಂಚಿಕೆ ೫

'ಅಚಲ' ಪತ್ರಿಕೆಯನ್ನು ಪಡೆಯಬಯಸುವವರು ದಯವಿಟ್ಟು ಕೆಳಗಿನ ವಿಳಾಸಕ್ಕೆ ಹತ್ತು ರೂಪಾಯಿಗಳನ್ನು ಎಂ.ಓ./ಡ್ರಾಫ್ಟ್ ಮೂಲಕ ಕಳುಹಿಸಿ.
ಕೂಪನ್‌ನಲ್ಲಿ ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸ ಬದಲಾದರೆ ಕೂಡಲೇ ಕಾರ್ಡಿನಲ್ಲಿ ಬರೆದು ತಿಳಿಸಬೇಕು.

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
26, 1ನೇ ಮೆ ನ್, ವೈಯಾಳಿಕಾವಲ್
ಬೆಂಗಳೂರು–560 003.

ಸಂಪಾದಕ ಮಂಡಳಿ :

ಎನ್. ಗಾಯತ್ರಿ, ದೇವಿ, ಭಾರತಿ ಸ್ಟ್ಯಾಳ್, ನೇಮಿಚಂದ್ರ

ಕಲೆ : ವೆಂಕಟಾಚಲಪತಿ

ಚಂದಾ ವಿವರ

ವಾರ್ಷಿಕ ಚಂದಾ	:	ರೂ	10–00
ಬಿಡಿ ಪ್ರತಿ	:	ರೂ	1–50
ವಿಶೇಷ ಪ್ರತಿ	:	ರೂ	2–00
ಆಜೀವ ಚಂದಾ	:	ರೂ	100–00

Printed at PRINTSWELL, 78, 2nd Main Road Nagappa Block, Srirampuram, Bangalore-21 & Published by Dr. G. Ramakrishna on behalf of Jagruthi Mahila Adhyayana Kendra
26, I Main, Vyalikaval, Bangalore-560 003.
Editor : N. GAYATRI

ಪುಸ್ತಕ ವಿಮರ್ಶೆಗಾಗಿ ಪುಸ್ತಕ ಕಳುಹಿಸುವವರು ದಯವಿಟ್ಟು ಎರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ.

ನಮ್ಮ ಹೊಸ ವಿಳಾಸ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
26, ಒಂದನೇ ಮೇನ್,
ವೈಯ್ಯಾಲಿಕಾವಲ್,
ಬೆಂಗಳೂರು–560 003.

ಒಳಗೇನಿದೆ....

ಎಂತಹ ಪ್ರಾತಿನಿಧ್ಯ ?....

ಎಲ್ಲ ಕಡೆ ಚುನಾವಣೆ ಕಾವು ಏರಿದೆ. ಬಿರುಸಿನ ಪ್ರಚಾರ ಸಾಗಿದೆ. ಮುಂದಿನ ಲೋಕಸಭೆಯಲ್ಲಿ ಹೆಚ್ಚು ಮಹಿಳಾ ಸದಸ್ಯರಿರುವುದಿಲ್ಲವೆಂಬುದಂತೂ ಈಗ ಸ್ಪಷ್ಟವಾಗಿದೆ. ಮಹಿಳೆಯರಿಗೆ ಹೆಚ್ಚಿನ ಪ್ರಾತಿನಿಧ್ಯ ಇರಬೇಕು; ರಾಜಕೀಯ ಚಟುವಟಿಕೆಯಲ್ಲಿ ಅವರು ಸಕ್ರಿಯ ಪಾತ್ರ ವಹಿಸಬೇಕು ಎಂದೆಲ್ಲ ಕೂಗಾಡುತ್ತಿದ್ದ ರಾಜಕೀಯ ಪಕ್ಷಗಳು ಈ ಚುನಾವಣೆಯಲ್ಲಿ ತಮ್ಮ ತಮ್ಮ ಪಕ್ಷದ ಎಷ್ಟು ಸದಸ್ಯೆಯರಿಗೆ ಟಿಕೇಟ್ ನೀಡಿದೆ ? ತನ್ನ ಒಟ್ಟು ಸ್ಪರ್ಧಿಗಳಲ್ಲಿ ಕಾಂಗ್ರೆ ಮಹಿಳೆಯರಿಗೆ ನೀಡಿರುವ ಪಾಲು ಶೇಕಡ ೪ರಷ್ಟು ಮಾತ್ರ. ಹಾಗೆಂದು ಉಳಿದ ಪಕ್ಷಗಳು ಹೆಚ್ಚು ಮಹಿಳೆಯರನ್ನು ಕಣದಲ್ಲಿ ನಿಲ್ಲಿಸಿದೆ ಎಂದಲ್ಲ. ಜನತಾ ದಳದ ಒಟ್ಟು ಅಭ್ಯರ್ಥಿಗಳಲ್ಲಿ ಮಹಿಳೆಯರು ಶೇಕಡ 3.5 ಮಾತ್ರ. ಭಾರತೀಯ ಜನತಾ ಪಕ್ಷದ ಒಟ್ಟು ಸ್ಪರ್ಧಿಗಳಲ್ಲಿ ಮಹಿಳಾ ಅಭ್ಯರ್ಥಿಗಳು ಶೇಕಡಾ 5.5. ಎಡ ಪಕ್ಷಗಳ ಅಭ್ಯರ್ಥಿಗಳಲ್ಲಿ ಶೇಕಡ 4.7ರಷ್ಟು ಮಾತ್ರ ಮಹಿಳಾ ಸ್ಪರ್ಧಿಗಳು. ಈ ಅಂಕಿ ಅಂಶಗಳು ಏನನ್ನು ಸೂಚಿಸುತ್ತವೆ ಎಂದರೆ ಲೋಕಸಭೆಯಲ್ಲಿ ಮಹಿಳೆಯರ ಧ್ವನಿ ಇನ್ನಷ್ಟು ಕುಗ್ಗುತ್ತದೆ ಎಂಬುದು.

ಪ್ರಸಕ್ತ ಲೋಕಸಭೆಯಲ್ಲಿ ಸದಸ್ಯೆಯರ ಸಂಖ್ಯೆ 42. 1962 ರಿಂದೀಚೆಗೆ ಚುನಾವಣೆಗಳಲ್ಲಿ ಗೆಲ್ಲುವ ಮಹಿಳೆಯರ ಸಂಖ್ಯೆ ಕುಗ್ಗುತ್ತಾ ಹೋಗಿದೆ. 1957ರಲ್ಲಿ ಕಣದಲ್ಲಿದ್ದ 42 ಮಹಿಳೆಯರಲ್ಲಿ 27 ಮಂದಿ ಗೆದ್ದಿದ್ದರು. 1962ರಲ್ಲಿ 32 ಮಹಿಳೆಯರು ಯಶಸ್ವಿಯಾಗಿದ್ದರು ಆಗ ಚುನಾವಣೆಯಲ್ಲಿ ಸ್ಪರ್ಧಿಸಿದವರ ಸಂಖ್ಯೆ 65. 1971ರಲ್ಲಿ 85 ಮಹಿಳೆಯರು ಸ್ಪರ್ಧಿಗಳಾಗಿದ್ದರೂ 21 ಮಂದಿಗೆ ಮಾತ್ರ ಸಂಸತ್ತಿನ ಮೆಟ್ಟಿಲು ತುಳಿಯುವುದು ಸಾಧ್ಯವಾಯಿತು. 1977ರಲ್ಲಿ ಸ್ಪರ್ಧಿಸಿದ್ದ 68 ಮಹಿಳೆಯರ ಪೈಕಿ 19 ಜನ ಮಾತ್ರ ಲೋಕಸಭೆ ಪ್ರವೇಶಿಸಿದರು. 1984ರಲ್ಲಿ 42 ಮಹಿಳೆಯರು ಜಯಗಳಿಸಿದರು. ಸ್ಪರ್ಧಿಸಿದ್ದ 164 ಮಂದಿ ಮಹಿಳೆಯರಲ್ಲಿ 36 ಜನರಿಗೆ ಆಡಳಿತ ಪಕ್ಷದ ಬೆಂಬಲ ದೊರೆತಿತ್ತು. ಆ ಚುನಾವಣೆಯಲ್ಲಿ ಇಂದಿರಾ ಹತ್ಯೆಯಿಂದ ದೊರೆತಿದ್ದ ಸಹಾನುಭೂತಿ ಮತಗಳು ಕಾಂಗ್ರೆಸ್ಸಿಗೆ ನೆರವಾದಂತೆ ಆ ಪಕ್ಷದ ಆಶೀರ್ವಾದ ಪಡೆದಿದ್ದ ಮಹಿಳೆಯರಿಗೂ ಅನುಕೂಲ ಉಂಟು ಮಾಡಿತೆಂದು ಹೇಳಬೇಕಾಗಿಲ್ಲ.

ರಾಜಕೀಯ ಪಕ್ಷಗಳು ತಮ್ಮದೇ ತಂತ್ರಗಳನ್ನು ರೂಪಿಸಿಕೊಳ್ಳುತ್ತವೆ: ಒಮ್ಮೆ ಗೆದ್ದ ಮಹಿಳಾ ಅಭ್ಯರ್ಥಿಗಳನ್ನು ಮತ್ತೆ ಸ್ಪರ್ಧೆಗೆ ಇಳಿಸುವುದು ಪರಿಪಾಠವಾಗಿ ಹೋಗಿದೆ. ಹೊಸ ಅಭ್ಯರ್ಥಿಗಳ 'ಪ್ರಯೋಗ' ಮಾಡಲು ಅವು ಮುಂದೆ ಬರುವುದೇ ಇಲ್ಲ. ಅಥವಾ ಪಕ್ಷಗಳಲ್ಲಿ ಮಹಿಳಾ ನಾಯಕತ್ವದ ಬೆಳವಣಿಗೆಯಾಗಿಲ್ಲವೆಂದೇ, ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಮಹಿಳೆಯರಿಗೆ ಶೇಕಡ 25 ರಷ್ಟು ಸ್ಥಾನ ಮೀಸಲು ಎಂದು ಜನತಾ (ದಳ) ಪಕ್ಷ ನಿರ್ಧರಿಸಿತ್ತಷ್ಟೆ. ಆದರೆ ಚುನಾವಣೆಗೆ ನಿಲ್ಲಿಸಲು ಅಭ್ಯರ್ಥಿಗಳು ಸಿಗದೆ ಅದು ಪರದಾಡಿತೆಂದು ಆ ಪಕ್ಷದವರೇ ಹೇಳುತ್ತಾರೆ. ರಾಜಕೀಯ ಪಕ್ಷಗಳು ತಮ್ಮ ಮಹಿಳಾ ಸದಸ್ಯರಿಗೆ ನಾಯಕತ್ವ ಬೆಳೆಸಿಕೊಳ್ಳಲು ಅವಕಾಶ ಕಲ್ಪಿಸಿಲ್ಲ ಎಂಬುದಕ್ಕೆ ಇದೊಂದು ಉದಾಹರಣೆ.

ಹಾಗೆಂದು ಪಕ್ಷಗಳಲ್ಲಿ ಸಕ್ರಿಯರಾಗಿರುವ ಮಹಿಳೆಯರು ಶಾಂತ ಚಿತ್ತರಾಗೇನೂ ಇಲ್ಲ. ಪ್ರತಿಯೊಂದು ಪಕ್ಷದಲ್ಲಿಯೂ ಅತೃಪ್ತರು ಇದ್ದಾರೆ. ಟಿಕೆಟ್ ನಿರಾಕರಿಸಿದ ಪ್ರಕರಣಗಳಲ್ಲಿ ಮಹಿಳೆಯರು ಅಸಮಾಧಾನ ವ್ಯಕ್ತಪಡಿಸಿರುವ ಪ್ರಸಂಗಗಳುಂಟು. ಪಕ್ಷದ ಪರವಾಗಿ ಪ್ರಚಾರ ಮಾಡಲು ಬೇಕು, ಸ್ಪರ್ಧಿಯಾಗುವುದು ಬೇಡ ಎಂದು ಈ ಮಹಿಳೆಯರು ಗುಡುಗುತ್ತಾರೆ. ಒಮ್ಮೆ ಕಾಂಗ್ರೆ ಸದಸ್ಯೆಯೊಬ್ಬರು ಹತಾಶರಾಗಿ ಹೇಳಿದ್ದರು: "ಈ ಗೋಮುಖ ವ್ಯಾಘ್ರ ನೀತಿಯಿಂದ ಬೇಸರವಾಗಿದೆ. ಇಲ್ಲಿ

ಅರ್ಹತೆ ಮುಖ್ಯವಲ್ಲ. ಮಹಿಳೆಯರಿಗೆ ಪ್ರೋತ್ಸಾಹವಿಲ್ಲ....ಗೂಂಡಾಗಳಿಗೆ ಟಿಕೆಟ್ ಸಿಗುತ್ತದೆ."

ಮಹಿಳೆಯರು ಸ್ವತಃ ತಾವೇ ಸ್ಪರ್ಧಿಸುವುದು ಕಷ್ಟವೇ. ಚುನಾವಣಾ ಆಯೋಗವೇ ಒಂದೊಂದು ಲೋಕಸಭಾ ಸ್ಥಾನದ ಚುನಾವಣೆ ವೆಚ್ಚವನ್ನು ಒಂದು ಲಕ್ಷ ರೂಪಾಯಿಗಳಿಗೂ ಹೆಚ್ಚು ಎಂದು ನಿಗದಿ ಪಡಿಸಿದೆ. ಅದಕ್ಕೆ ನಾಲ್ಕು ಪಟ್ಟು ಹೆಚ್ಚು ವೆಚ್ಚವಾದೀತು. ಅಷ್ಟು ಹಣ ಖರ್ಚು ಮಾಡುವುದು ಮಹಿಳೆಯರಿಂದ ಸಾಧ್ಯವೆ? ಪಕ್ಷದ ಜೀಪು, ಪೋಸ್ಟರ್‌ಗಳಿದ್ದರೆ ಪ್ರಯತ್ನ ಸಾಧ್ಯ. ದುಬಾರಿ ಚುನಾವಣೆಯು ಆಸಕ್ತರನ್ನೂ ಹಿಮ್ಮೆಟ್ಟಿಸುತ್ತದೆ. ಅಲ್ಲದೆ ಗೂಂಡಾಗಿರಿಯಲ್ಲಿ ಚುನಾವಣೆ ಕೂಡಾ ಹಣ, ಹೆಂಡದಲ್ಲಿ ಮುಳುಗಿ ಹೋಗುವುದು ಸಾಮಾನ್ಯ. ಇಂಥ ಕಲ್ಮಶದಲ್ಲಿ ಪ್ರಾಮಾಣಿಕರ ಪ್ರಯತ್ನ ಹೂತು ಹೋದೀತು.

ಲೋಕಸಭೆಯಲ್ಲಿ ಎಷ್ಟು ಮಹಿಳೆಯರು ಇದ್ದಾರೆ ಎಂಬುವುದಕ್ಕಿಂತ ಅಲ್ಲಿ ಅವರು ಎಷ್ಟರ ಮಟ್ಟಿಗೆ ಮಹಿಳಾ ಪ್ರತಿನಿಧಿಯಾಗುತ್ತಾರೆ ಎಂಬುದೂ ಮುಖ್ಯ. ಮಹಿಳಾ ಸಮಸ್ಯೆಗಳನ್ನು ಯಾವ ರೀತಿ ಸಭೆ ಮುಂದಿಡುತ್ತಾರೆ ಎಂಬುದು ಗಮನಾರ್ಹ. ನಮ್ಮ ಮಹಿಳಾ ಪ್ರಧಾನಿ ಅಥವಾ ಶಾಸಕಿಯರು ಮಹಿಳೆಯರ ಅಭಿವೃದ್ಧಿಗೆ ಕೈಗೊಂಡ ಕಾರ್ಯಕ್ರಮಗಳೇನು? ಅವರು ನಿಜವಾಗಿಯೂ ಮಹಿಳಾ ಪ್ರತಿನಿಧಿಗಳೇ? ಮಹಿಳೆಯರು ತಮ್ಮ ಮತ ಚಲಾಯಿಸುವಾಗ ಈ ಪ್ರಶ್ನೆಗಳನ್ನು ಹಾಕಿಕೊಳ್ಳಬೇಕು. ಯಾವ ಪಕ್ಷ ಮಹಿಳಾ ಸಮಸ್ಯೆಗಳ ಬಗೆಗೆ ಸ್ಪಷ್ಟ ನಿಲುವು ತಳೆದು ಹೋರಾಟ ನಡೆಸಿದೆ ಎಂಬುವನ್ನು ಪರಾಮರ್ಶಿಸಬೇಕು. ಇಂಥ ರಾಜಕೀಯ ಪ್ರಜ್ಞೆಯಿಂದ ಮುಂದಡಿ ಇಟ್ಟರೆ ಮಾತ್ರ ಚುನಾವಣೆಗಳಿಗೆ ಅರ್ಥ ಬರುತ್ತದೆ.

ಕರ್ನಾಟಕದಲ್ಲಿ ಮಹಿಳಾ ಮತದಾರರ ಸಂಖ್ಯೆ 1 ಕೋಟಿ 39 ಲಕ್ಷ 32 ಸಾವಿರದ 353; ಹೆಚ್ಚೂ ಕಮ್ಮಿ ಒಟ್ಟು ಮತದಾರರಲ್ಲಿ ಅರ್ಧದಷ್ಟು ಭಾಗ (ಒಟ್ಟು ಮತದಾರರು 2 ಕೋಟಿ 85 ಲಕ್ಷದ 53 ಸಾವಿರದ 345). ಈ ಬಾರಿ 18 ರಿಂದ 21 ವರ್ಷ ವಯೋಮಾನದವರಿಗೆ ವೋಟು ಹಾಕುವ ಪ್ರಥಮ ಅವಕಾಶ. ಈ ಹೊಸ ಮತದಾರರ ಸಂಖ್ಯೆಯೇ 23,54,482 ಇದೆ. ಇವರಲ್ಲಿ 11,24,867 ಮಂದಿ ಯುವತಿಯರು. ಈ ಯುವಜನರು ಒಟ್ಟು ಮತದಾರರಲ್ಲಿ ಶೇಕಡ 12.5 ರಷ್ಟಾಗುತ್ತಾರೆ. ಪ್ರತಿ ಚುನಾವಣೆಯಲ್ಲಿಯೂ ಹೆಚ್ಚು ಪುರುಷರು ವೋಟು ಹಾಕುತ್ತಾರೆ. ಕಳೆದ ಚುನಾವಣೆಯಲ್ಲಿ ಶೇಕಡ 55.8 ರಷ್ಟು ಮಹಿಳೆಯರು ಮತ ಚಲಾಯಿಸಿದ್ದರು. ಈ ಅಂಕಿ ಅಂಶಗಳಿಗಿಂತ ವೋಟು ಹಾಕುವ ಹಕ್ಕು ಪಡೆದಿರುವ ಮಹಿಳೆಗೆ ಯಾರಿಗೆ ತನ್ನ ಮತ ಎಂಬ ನಿರ್ಧಾರ ಕೈಗೊಳ್ಳುವ ಸ್ವಾತಂತ್ರ್ಯವಿದೆಯೆ? ಗ್ರಾಮಾಂತರ ಪ್ರದೇಶಗಳಂತೂ ಸ್ತ್ರೀ-ಪುರುಷರಿಬ್ಬರೂ ತಮ್ಮ ಗ್ರಾಮ ಮುಖಂಡನ ಬೆರಳ ಸೂಚನೆಗೇ ಬದ್ಧರು. ನಾಳೆ ದಿನ ಕೂಲಿಗೇ ಕಂಟಕವಾದರೆ? ಭಯದ ನೆರಳಿನಲ್ಲಿ ಮತದಾನ. ಗಂಡ ಹೇಳಿದ್ದೇ ವೇದ ವಾಕ್ಯ. ಅವ ಬಡಿದರೆ....ಮತ್ತೊಂದು ರೀತಿಯ ಭೀತಿ....ಈ ಸನ್ನಿವೇಶದಲ್ಲಿ ಮುಕ್ತ ಮತದಾನ ಸಾಧ್ಯವೆ? ಜನರ ಆಶೋತ್ತರಗಳಿಗೆ ಸ್ಪಂದಿಸುವ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಸ್ವಾತಂತ್ರ್ಯ ದೊರೆಯಬೇಕು.' ಅಂಥ ಅಭ್ಯರ್ಥಿ ಬಗೆಗೆ ಪರಾಮರ್ಶಿಸುವ ರಾಜಕೀಯ ಪ್ರಜ್ಞೆ ಜನರಲ್ಲಿ ಮೂಡುವಂತಾದರೆ ಪ್ರಜಾಪ್ರಭುತ್ವ ತನ್ನ ನಿಜ ಅರ್ಥದಲ್ಲಿ ಜೀವಂತವಾಗಿ ಉಳಿದೀತು.

—ಎನ್. ಗಾಯಿತ್ರಿ ದೇವಿ.



ಪುಸ್ತಕ ಪರಿಚಯ

○ ಗುಡಿಹಳ್ಳಿ ನಾಗರಾಜ

ತಮ್ಮ ಹಳ್ಳಿಗಳಲ್ಲಿ ಕೂಲಿ ಕೆಲಸ ಸಿಗದೆ ಹಸಿವಿನಲ್ಲಿ ಬಳಲುವ ಕೂಲಿಕಾರರು, ಗಿರಾಕಿಗಳು ಗಿಟ್ಟದ ಕುಶಲ ಕಸುಬಿನವರು, ಸಣ್ಣ ಪುಟ್ಟ ರೈತರು ಉದ್ಯೋಗವನ್ನು ಅರಸುತ್ತ ಹತ್ತಿರದ ನಗರಗಳಿಗೆ ವಲಸೆ ಹೋಗುತ್ತಾರೆ. ಬರಗಾಲದ ಸಂದರ್ಭದಲ್ಲಂತೂ ಇಂತಹ ವಲಸೆ ಇನ್ನೂ ಹೆಚ್ಚು. ಹರಿಯಾಣ, ಉತ್ತರ ಪ್ರದೇಶ, ರಾಜಸ್ಥಾನದ ಊರುಗಳಿಂದ ದೆಹಲಿಗೆ ವಲಸೆ ಬಂದ ಬಡವರು ತಮಗೆ ಕೂಲಿ ಸಿಕ್ಕ ಜಾಗದಲ್ಲೇ ಬೀಡು ಬಿಟ್ಟಿದ್ದಾರೆ. ಹೆಚ್ಚಿನ ಪಾಲು ಗಾರೆ ಕೆಲಸ ಮಾಡುವ ಇವರಿಗೆ ತಾವು ಕಟ್ಟುತ್ತಿರುವ ಬಂಗಲೆಗಳ ಪಕ್ಕದ ಬಯಲೇ ಆಸರೆ. ಅಲ್ಲೇ ದೊರಕುವ ಖಾಲಿ ಡಬ್ಬ, ಹರಕು ಚಾಪೆ, ಮುರುಕು ರಟ್ಟುಗಳನ್ನು ಹೊಂದಿಕೊಂಡು ಇವರು ತಮ್ಮ "ಅರಮನೆ" ನಿರ್ಮಿಸಿಕೊಂಡಿದ್ದಾರೆ. ದೆಹಲಿಯಲ್ಲಿ ಇಂತಹ ನೂರಾರು ಕೊಂಪೆಗಳಿವೆ.

ರಾಜಸ್ಥಾನದ ರಜಪೂತ ಹಾಗೂ ಯಾದವರು ಹೆಚ್ಚಾಗಿ ವಾಸಿಸುವ ಇಂತಹ ಬಸ್ತಿಯೊಂದರ ಯುವತಿ ಬಸಂತಿಯ ಸುತ್ತಲಿನ ವಿವರಗಳು ಕಥೆಯಾಗಿ ಭೀಷ್ಮ ಸಾಹನಿ ಅವರ "ಬಸಂತಿ"ಯಲ್ಲಿ ಮೈದಾಳಿವೆ. ಬಸಂತಿಯೇ ಇಲ್ಲಿನ ಕೇಂದ್ರ ಪಾತ್ರ. ಆಕೆಯ ಜೀವನದ ಏರಿಳಿತಗಳೇ ಕೆಳವರ್ಗದ ಜನರ ಸ್ಥಿತಿಯನ್ನು ವಿವರಿಸುತ್ತವೆ. ಹಳ್ಳಿಯಲ್ಲಿ ಕೂಲಿ ಮಾಡುತ್ತಿದ್ದ ಬಸಂತಿಯ ತಂದೆ ಚೌಧುರಿ ಪಟ್ಟಣಕ್ಕೆ ಬಂದು ಕ್ಷೌರಿಕ ವೃತ್ತಿ ಅವಲಂಬಿಸಿದ್ದಾನೆ. ಅವನಿಗೆ ಆರು ಜನ ಮಕ್ಕಳು. ರಾಜಸ್ಥಾನದಿಂದ ದೆಹಲಿಗೆ ರೈಲಿನಲ್ಲಿ ಬರುತ್ತಿರುವಾಗ ದಾರಿಯಲ್ಲಿ ಸಿಗುತ್ತಿರುವ ಪ್ರತಿಯೊಂದು ನಿಲ್ದಾಣದಲ್ಲೂ ಬಸಂತಿಯ ಅಣ್ಣ ಚುರುಕಾಗಿ ಇಳಿದು ಹತ್ತಿ ನಲಿಯುತ್ತಿರುತ್ತಾನೆ. ನಿಲ್ದಾಣದಲ್ಲಿ ರೈಲು ನಿಂತ ಕೂಡಲೇ ಕೆಳಕ್ಕೆ ಜಿಗಿಯುವ ಅವನು ರೈಲು ಹೊರಡುವ ಹೊತ್ತಿಗೆ ಅದೇಗೋ ಹತ್ತಿಬಿಡುತ್ತಿದ್ದ. ಒಂದು ಬೋಗಿಯಲ್ಲಿ ಕುಳಿತ ತಾಯಿ ಮತ್ತೊಂದು ಬೋಗಿಯಲ್ಲಿ ಕುಳಿತ ತಂದೆ ಹತ್ತಿರ ತನ್ನ ಮಗ ಇರಬಹುದೆಂದು ಒಮ್ಮೆ ಭಾವಿಸಿದರೆ, ಮತ್ತೊಮ್ಮೆ ತಾಯಿ ಬಳಿ ಇರಬಹುದೆಂದು ತಂದೆ ತಿಳಿಯುತ್ತಾನೆ. ಒಮ್ಮೆ ರೈಲು ಗಕ್ಕನೆ ನಿಂತಾಗ ರೈಲ್ವೆ ಹಳಿಗೆ ಸಿಕ್ಕು ಯಾರೋ ಎರಡು ಕಾಲು ಕಳೆದುಕೊಂಡ ಸುದ್ದಿ ಹರಡುತ್ತದೆ. ರೈಲಿನಲ್ಲಿ ಶೇಂಗಾ, ಬೀಡಿ, ಸಿಗರೇಟು ಮಾರುವ ಯಾರೋ ಹುಡುಗ ಈ ರೀತಿ ಅಪಘಾತಕ್ಕೆ ಬಲಿಯಾದ ಎಂದು ಒಬ್ಬರೆಂದರೆ ಮತ್ತೊಬ್ಬರು ರಾಜಸ್ಥಾನದ ಹುಡುಗನಂತೆ ಎನ್ನುತ್ತಾರೆ. ಎರಡು ಕಾಲು ಕಳೆದುಕೊಂಡ ಮೇಲೆ ಪ್ರಯೋಜನ ಏನು ಬಿಡಿ ಎಂದು ಒಬ್ಬ ದಢೂತಿ ಹೆಂಗಸು ಹೇಳುತ್ತಾಳೆ. ಚೌಧುರಿ ಅಸಹಾಯಕತೆಯಲ್ಲಿ ಹಾಗೆಯೇ ಕುಳಿತುಕೊಂಡಿರುತ್ತಾನೆ. ಧೆಹಲಿಯಲ್ಲಿ ರೈಲಿನಿಂದ ಇಳಿದಾಗಲೇ ಈ ರೀತಿ ಅಪಘಾತಕ್ಕೆ ಈಡಾದವನು ಮತ್ತಾರೂ ಆಗಿರದೆ ತನ್ನ ಮಗನೇ ಆಗಿದ್ದ ಎಂಬ ಸಂಗತಿ ಚೌಧುರಿಗೆ ತಿಳಿಯುತ್ತದೆ. ಈಗ ಇರುವ ತನ್ನ ಮಕ್ಕಳು ಹಾಗೂ ಹೆಂಡತಿಗೆ ತಿನ್ನಲು ಕೂಳಿರದ ಪರಿಸ್ಥಿತಿ ಇರುವ ಚೌಧುರಿ ಮಗನನ್ನು ವಾಪಸ್ ಕರೆತರಲು ಹೋಗುವುದೇ ಇಲ್ಲ, ವಸ್ತುಸ್ಥಿತಿ ಅಷ್ಟೊಂದು ಧಾರುಣವಾಗಿದೆ. ಇಂತಹ ಧಂಗು ಬಡಿಸುವ ವಿವರಗಳೊಂದಿಗೆ ಒಂದು ಜನಾಂಗದ ಸ್ಥಿತಿಯನ್ನೇ ಹೇಳುವ ಅಪರೂಪದ ಕಲೆಗಾರಿಕೆ ಇದು.

ಚೌಧುರಿಗೆ ಈಗ ಉಳಿದಿರುವುದು ಬಸಂತಿ ಹಾಗೂ ಅವಳ ತಮ್ಮ ರಾಘವ ಮಾತ್ರ. ರಾಮು ಉಳಿದಿರುವ ಒಬ್ಬನೇ ಮಗ ಎಂಬ ಕಾರಣಕ್ಕೆ ಅವನಿಗೆ ವಿಶೇಷ ಮನ್ನಣೆ. ಗಂಡು–ಹೆಣ್ಣು ಮಕ್ಕಳನ್ನು ತಾರತಮ್ಯದ ದೃಷ್ಟಿಯಿಂದ ನಡೆಸಿಕೊಳ್ಳುವ ಫ್ಯೂಡಲ್ ಮೌಲ್ಯಗಳು ಕೆಳವರ್ಗಕ್ಕೂ ಹೊರತಾದದ್ದಲ್ಲ ಎಂಬುದನ್ನು ಸಾಹನಿ ದಾಖಲಿಸುತ್ತಾರೆ. ಬಸ್ತಿಯ ರಜಪೂತರು ಹಳ್ಳಿಯ

ಪಂಚಾಯಿತಿ ವ್ಯವಸ್ಥೆಯನ್ನೇ ಇಲ್ಲಿ ನಡೆಸುತ್ತಾರೆ. ಮಂತ್ರಿ ಮಾನ್ಯರ ಬಳಿಗೆ ಹೋಗಿ ಈಗ ತಾವು ವಾಸಿಸುವ ಮನೆಗಳನ್ನು ಕಾಯಂ ಮಾಡುವಂತೆ ಒತ್ತಾಯಿಸುತ್ತಿರುತ್ತಾರೆ. ಬುರಾಕ್ರಸಿ ಎಂಬಿನ ಆಟವನ್ನೇ ಆಡುತ್ತದೆ. ತಮ್ಮ ಮನೆ ಬಗ್ಗೆ ಬೇಡಿಕೆ ತೆಗೆದುಕೊಂಡು ಹೋಗಿರುವ ನಾಯಕರು ಸರಿಯಾಗಿ ವಾದಿಸಲು ಸಾಧ್ಯವಾಗದ್ದಕ್ಕೆ ತಮ್ಮ ಬೇಡಿಕೆ ಈಡೇರಲಿಲ್ಲ ಎಂದೇ ಪಂಚಾಯಿತಿಯ ಇತರ ಸದಸ್ಯರು ತಿಳಿದಿದ್ದಾರೆ. ಒಟ್ಟು ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳಲಾರದ ಈ ಜನತೆಯ ಅಸಹಾಯಕ ಮಾನಸಿಕ ಸ್ಥಿತಿಯನ್ನು ಸಾಹನಿ ಇಲ್ಲಿ ಯಥಾವತ್ತಾಗಿ ಸೆರೆಹಿಡಿದಿದ್ದಾರೆ. ಅವರ ಹಾಸ್ಯ ಪ್ರಜ್ಞೆ, ಜೀವನದ ಬಗೆಗಿನ ಗಾಢ ಶ್ರದ್ಧೆಯನ್ನೂ ಇತರ ವಿವರಗಳಲ್ಲಿ ಕಟ್ಟಿಕೊಡುತ್ತಾರೆ.

ಚೌಧುರಿ ತನ್ನ 14 ವರ್ಷದ ಮಗಳಾದ ಬಸಂತಿಯನ್ನು 60 ವರ್ಷ ವಯಸ್ಸಿನ ಕುಂಟ ದರ್ಜಿ ಬುಲಾರೆ ರಾಮನಿಗೆ 1,200ರೂಗಳಿಗೆ ಮಾರಿದ್ದಾನೆ. ಸ್ವಲ್ಪ ಉತ್ತಮ ಸ್ಥಿತಿಯಲ್ಲಿರುವ ಬ್ರಹ್ಮಚಾರಿ ಬುಲಾರಿಗೆ ಮದುವೆಯಾಗಿ ಹೆಂಡತಿಯೊಂದಿಗೆ ತನ್ನ ಮನೆ ಅಂಗಳದಲ್ಲಿ ಕಲೆತುಕೊಳ್ಳುವುದು ಜೀವನದ ಏಕ ಮಾತ್ರ ಕನಸು. ಮರುಗಳಿಗೆಯೇ ಅವನು ಸತ್ತರೂ ಸರಿ. ಬಸ್ತಿಯಲ್ಲಿ ಎಲ್ಲರಿಗೂ ಅಪಹಾಸ್ಯದ ವಸ್ತು ಈ ಕುಂಟ ಬುಲಾರೆ. ಪಂಚಾಯಿತಿ ಕಟ್ಟೆಯಲ್ಲಿ ಎಲ್ಲರೂ ಅವನಿಗೆ ಪೂಸಿ ಹೊಡೆಯುತ್ತಾರೆ. ಕುಂಟನಿಗೆ ಕೊನೆಗೊಮ್ಮೆ ಬಸಂತಿ ಸಿಕ್ಕಾಗ ಪಂಚಾಯಿತಿ ಜನರಿಗೆ ಲಂಚದ ರೂಪದಲ್ಲಿ ಲಾಡು ತಿನ್ನಿಸುತ್ತಾನೆ. "ಲಾಡು ತಿಂದು ಬಾಯಿ ಚಪ್ಪರಿಸುವ ಜನರಲ್ಲಿ ಒಬ್ಬನಾದರೂ, ಬಾಯಿ ತಪ್ಪಿಯಾದರೂ 14 ವರ್ಷದ ಹುಡುಗಿ ಬಸಂತಿಯನ್ನು 60ರ ಮುದುಕ ಬುಲಾರೆ ಮದುವೆಯಾಗುವುದನ್ನು ಟೀಕಿಸಲಿಲ್ಲ." ಜೀವನದ ವೈವಿಧ್ಯಮಯ ಅನುಭವಗಳು ಕಥೆ–ಉಪಕತೆಗಳ ರೂಪ ತಾಳುತ್ತಲೆ, ಕಟು ವಾಸ್ತವದ ವ್ಯಂಗ್ಯ, ವಿಡಂಬನೆಗಳು ನಿರೂಪಿತವಾಗಿದ್ದು, ಬದುಕಿನ ಎಲ್ಲ ಆಯಾಮಗಳನ್ನು ತಟ್ಟುವ, ಸಂಕೀರ್ಣಮಯ ಬದುಕಿನ ಶೋಧನೆಯೂ ಆಗಿ ದಟ್ಟ ಅನುಭವ ಮೂಡಿಸುತ್ತದೆ. ಅತ್ಯಂತ ಪ್ರಖರ ರಾಜಕೀಯ ಪ್ರಜ್ಞೆಯ ಕಲಾವಿದನ ಕೈಯಲ್ಲಿ ಮೂಡಿ ಬರುವ ವಾಸ್ತವತೆಯ ಚಿತ್ರಣ ಇದು.

ಬಸಂತಿ : ಮೂಲ ಭೀಷಮ್ ಸಹಾನಿ
ಅನುವಾದ : ಎಸ್. ಎಮ್. ರಾಮಚಂದ್ರಸ್ವಾಮಿ
ಶ್ರೀಮತಿ ಶಾರದಾಸ್ವಾಮಿ
ಪ್ರಕಾಶಕರು: ನವ ಕರ್ನಾಟಕ ಪಬ್ಲಿಕೇಷನ್ಸ್ ಪ್ರೈ. ಲಿಮಿಟೆಡ್.

ಹೇಗೋ ಸಹನೀಯವಾಗಿ ಸಾಗಿದ್ದ ಬಸ್ತಿಯ ಬದುಕಿನಲ್ಲಿ ಅಲ್ಲೋಲ ಕಲ್ಲೋಲವಾಗುವುದು ಅಲ್ಲಿನ ಮನೆಗಳನ್ನು ನೆಲಸಮ ಮಾಡಲು ಬಂದ ಬುಲ್‌ಡೋಜರ್‌ನಿಂದ. ಕೊಂಪೆಯ ಎಲ್ಲರ ಮನೆಗಳಲ್ಲಿನ ಒಂದೆರಡು ಚೆಂಬು, ಲೋಟ, ಹಾಸಿಗೆ ಸುರುಳಿ, ಹರುಕು ಬಟ್ಟೆಗಳು ನೆಲಸಮವಾದದ್ದರ ಅಡಿಯಲ್ಲಿ ಕೊಚ್ಚಿ ಹೋಗುತ್ತವೆ. ಅಳಿದುಳಿದ ತಮ್ಮ "ಸಂಪತ್ತ"ನ್ನೇ ಬಗಲಲ್ಲೆ ಅವುಚಿಕೊಂಡು ಗಾಳಿ ಬಂದತ್ತ ಮತ್ತೆ ಈ ಜನ ಹೋಗುತ್ತಾರೆ.

ಚೌಧರಿಯು ಹೀಗೆ ಎಲ್ಲ ತೊರೆದು ಹೋಗುವಾಗ ಒಬ್ಬನೇ ಮಗ ರಾಮು ಬಗ್ಗೆ ಮಾತ್ರ ಸ್ವಲ್ಪ ಕಾಳಜಿ. ಆದ್ದರಿಂದಲೇ ಅವನು ತಂದೆ ತಾಯಿಯರಿಂದ ತಪ್ಪಿಸಿಕೊಳ್ಳದೆ ಅವರೊಂದಿಗೇ ಹೋಗಲು ಸಾಧ್ಯವಾಗುತ್ತದೆ. ಆದರೆ ಬಸಂತಿಯ ಪಾಡು ಅದಲ್ಲ. ಅವಳು ಎಷ್ಟಾದರೂ ಹೆಣ್ಣು ತಾನೆ! ಬಿರುಗಾಳಿಗೆ ಸಿಕ್ಕ ತರಗೆಲೆ ಅವಳ ಬಾಳು. ಬದುಕಿನ ಘೋರತೆಯ ಮಧ್ಯೆಯೂ ಅವಳು ಹಾಡುತ್ತಾಳೆ, ಕುಣಿಯುತ್ತಾಳೆ, ಗೋಡೆ ಜಿಗಿಯುತ್ತಾಳೆ. ದೀನೂನ ಬೆನ್ನ ಹಿಂದೆ ಸೈಕಲ್ ಸವಾರಿ ಮಾಡುತ್ತ ಧಿಮಾಕಿನಿಂದ ಹೋಗುತ್ತಾಳೆ.

ಬಸ್ತಿ ಹಾಳು ಬಿದ್ದಿದೆ. ಅದು ಈಗ ಕಾಲಚಕ್ರ ಉರುಳಿ ಧ್ವಂಸ ಮಾಡಿದಂತೆ ಕಾಣುತ್ತದೆ. "ಹಾಗೆ ನೋಡಿದರೆ ವಿನಾಶಕಾರಿಯಾದುದು ಕಾಲಚಕ್ರವಲ್ಲ. ಮನುಷ್ಯನ ಮನೆ ಮಾರುಗಳನ್ನು ಮುರಿಯಲು ಮನುಷ್ಯನೇ ಕಾಲಚಕ್ರವನ್ನು ಉರುಳಿಸುತ್ತಾನೆ."

ದೀನೂನ ಸ್ನೇಹದಲ್ಲಿ ಬಸಂತಿ ಅವನ ಪ್ರೀತಿಗಾಗಿ ಹಂಬಲಿಸುತ್ತಾಳೆ. ಹೀಗೆ ಇರುತ್ತಿರುವಾಗಲೇ ಒಂದು ದಿನ ಅವನ ವಿದ್ಯಾರ್ಥಿ ಭವನದ ರೂಮಿನಲ್ಲಿ ದೇವರ ಫೋಟೋದ ಕೆಳಗೆ ಪ್ರಮಾಣ ಮಾಡಿ ಮದುವೆಯಾಯಿತು ಎಂದು ಹೇಳಿಬಿಡುತ್ತಾಳೆ. "ಅದು ಅಭಿನಯವೂ ಆಗಿತ್ತು. ಹುಡುಗಾಟವೂ ಆಗಿತ್ತು. ಮದುವೆಯೂ ಆಗಿತ್ತು. ಅವಳ ಪ್ರಾರ್ಥನೆಯೂ ಆಗಿತ್ತು.– ಇವೆಲ್ಲದರ

19 ನೇ ಪುಟಕ್ಕೆ

ಮಾತು - ಕೃತಿ

ಸುತ್ತಲಿನ ಸಮಾಜಕ್ಕೆ ಕಲಾವಿದನ, ಕೃತಿಯ Commitent ಎಂಥದ್ದು ? ಯಾವೆಲ್ಲ ಬಗೆಯಲ್ಲಿ ಅದು ವ್ಯಕ್ತಗೊಂಡೀತು ಎಂಬ ಪ್ರಶ್ನೆ ಆಗಾಗ ನನ್ನನ್ನು ಕಾಡು ತ್ತದೆ ! ಸುತ್ತಲಿನ ಬಡತನ ಹಸಿವು, ಅನಕ್ಷರತೆ ಇದೆಲ್ಲ ಕಲಾವಿದನನ್ನು ತಟ್ಟಿದಾಗ, ತನ್ನಲ್ಲಿ ಉಂಟಾದ ಕಳವಳ ವನ್ನು ಆತ ಚಿತ್ರದಲ್ಲಿ ಚಿತ್ರಿಸಿಬಿಟ್ಟರೆ, ಹಸಿವು ನೀಗೀತೆ, ಜೋಪಡಿಗಳು ಮಾಯವಾದೀತೆ? ರಚನಾತ್ಮಕವಾಗಿ ಏನ ನ್ನಾದರೂ ಮಾಡುವ ಹಂಬಲವಿರುವ ಕಲಾವಿದ ನಿರುಪಾ ಯನಾಗಿ ನಿಲ್ಲಬೇಕೆ? ಚಿತ್ರಗಳು ಪರೋಕ್ಷವಾಗಿ ಯಾರನ್ನಾ ದರೂ ಪ್ರೇರೇಪಿಸಬಹುದೇನೋ, ಆದರೆ ಅದು ದೂರದ ಮಾತು. ಥಿಯರಿ. ಯಾವ ಕೃತಿ ಯಾರ ಮೇಲೆ ಎಷ್ಟು ಯಾವ ರೀತಿ ಪ್ರಭಾವ ಬೀರಿತು, ಅದರಿಂದ ಪ್ರೇರಣೆ ಗೊಂಡ ವೀಕ್ಷಕ ಯಾವ ಕ್ರಿಯೆ ಕೈಗೊಂಡ ಎಂಬುದೆಲ್ಲ ಅಳೆಯಲಾಗದ ಸಂಗತಿಗಳು.

ಆಹಾರ, ವಿದ್ಯಾಭ್ಯಾಸದಿಂದ ವಂಚಿತರಾದ ದೀನ ದಲಿತ ಮಕ್ಕಳಿಗೆ ಅವಕಾಶ ಕಲ್ಪಿಸಲು ಕಲೆಯನ್ನು ಬಳಸಿ ಕೊಂಡ ಸಾರ್ಥಕ ಪ್ರಯತ್ನ ಇಲ್ಲಿದೆ. ನೆಹರೂ ಜನ್ಮ ಶತಾಬ್ದಿಯ ನೆನಪಿಗೆ ಈ ಲೇಖನವನ್ನು ಪ್ರಕಟಿಸುತ್ತಿ ದ್ದೇವೆ.

ನಾನು ಕೆಳಗೆ ನಿರೂಪಿಸಿರುವ ಪ್ರಸಂಗ ನಮ್ಮ ಸಮ ಕಾಲೀನ ಸಂದರ್ಭದಲ್ಲೇ ನಡೆದ ಒಂದು ಯತ್ನ, ಫಲಪ್ರದ ವಾದುದೂ ಕೂಡ, ಫಲಿತಾಂಶಗಳು ಸಹ ನಮ್ಮ ಕಣ್ಣೆ ದುರು ಇವೆ.

ಕಳೆದ ವರ್ಷ ಸೆಪ್ಟೆಂಬರ್ ಒಂದರಿಂದ ಅಕ್ಟೋಬರ್ ಇಪ್ಪತ್ತೆರಡರವರೆವಿಗೆ ಸಂಚಾರಿ ಪ್ರದರ್ಶನವೊಂದು ಸಮ ಕಾಲೀನ ಭಾರತೀಯ ಕಲಾವಿದರ ಕೃತಿಗಳನ್ನು ಡೆಲ್ಲಿ, ಕಲ್ಕತ್ತಾ, ಬೊಂಬಾಯಿ ಹಾಗೂ ಬೆಂಗಳೂರುಗಳಲ್ಲಿ ಪ್ರದ ರ್ಶಿಸಿತು. ಅದರಲ್ಲಿ ಭಾರತದ ಬಹುಪಾಲು ಎಲ್ಲಾ ಖ್ಯಾತ ಕಲಾವಿದರ ಕೃತಿಗಳು ಇದ್ದವು. ಕಿಷನ್ ಖನ್ನ, ಲಕ್ಷ್ಮಣ್ ಪೈ, ಜೆ. ಸ್ವಾಮಿನಾಥನ್, ರಾಮೇಶ್ವರಭ್ರೂಟಾ, ಎ. ರಾಮಚಂದ್ರನ್, ಗಣೇಶ್ ಪ್ಯಾನೆ, ಹೆಬ್ಬಾರ್, ಸತೀಷ್ ಗುಜ್ರಾಲ್, ಸೂಜ ಇತ್ಯಾದಿ. ಅಲ್ಲಿದ್ದ ಕೃತಿಗಳ ವ್ಯಾಪಕ ಹರವಿನಿಂದಾಗಿ ಆ ಪ್ರದರ್ಶನ ಭಾರತದ ಇಂದಿನ ಸಮಕಾಲೀನ ಕಲೆಯ ಅತ್ಯುತ್ತಮ ಸಂಕ್ಷಿಪ್ತ ವರದಿಯಾಗಿ ಮಾರ್ಪಟ್ಟಿತು.

Cry ಗಾಗಿ ಕಲೆ ಎಂದು ಕರೆಯಲ್ಪಟ್ಟ ಈ ಪ್ರದರ್ಶನ ದಲ್ಲಿ ಮಾರಾಟವಾಗುವ ಕೃತಿಗಳಿಂದ ಸಂಗ್ರಹವಾಗುವ ಹಣ 35 ಲಕ್ಷ ಎಂದು ಅಂದಾಜು ಮಾಡಲಾಯಿತು. ಭಾರತದ ದೀನ, ದಲಿತ ಮಕ್ಕಳ ವಿದ್ಯಾಭ್ಯಾಸ ಹಾಗೂ ಪೌಷ್ಟಿಕ ಆಹಾರ ಮತ್ತು ಇನ್ನಿತರ ಯೋಜನೆಗಳಿಗಾಗಿ ಕಳೆದ ಹತ್ತು ವರ್ಷಗಳಿಂದ ಕಲಾವಿದರ, ಡಿಸೈನರ್‌ಗಳ ಉಪಾಧ್ಯಾಯರ, ವಾಯುಯಾನಿಗಳ, ಬರಹಗಾರರ; ಲೆಕ್ಕಿಗರ ಹಾಗೂ ಇನ್ನಿತರ ಕಸುಬಿನವರೆಲ್ಲರ ಯತ್ನವನ್ನೂ ಒಂದುಗೂಡಿಸಲು ಶ್ರಮಿಸುತ್ತಿರುವ ಸಂಸ್ಥೆ Cry. (Child Relief And you)

ಕೇವಲ ಏಳು ಜನ ಸೇರಿ 1979ರಲ್ಲಿ Cry ಸ್ಥಾಪಿಸಿ ದರು. ಅವರೂ ಸಹ ತೀರ ಸಾಧಾರಣ ನಾಗರಿಕರಾಗಿ ದ್ದರು. ಓರ್ವ ವಿದ್ಯಾರ್ಥಿ, ಓರ್ವ ಹೋಟೆಲ್ ಕೆಲಸಗಾರ, ಓರ್ವ ವಾಯು ಸಂಚಾಲಕ.... ಹೀಗೆ. ಅವರೆಲ್ಲರಿಗೂ ಇದ್ದ ಸಾಮಾನ್ಯ ಉದ್ದೇಶವೆಂದರೆ ಮಕ್ಕಳಿಗೆ ಸಹಾಯ ಮಾಡಬೇಕು. ಆರಂಭದಲ್ಲಿ ಆ ಗುಂಪಿನ ಸದಸ್ಯರಿಗೆ ತಮ್ಮ ಕಳಕಳಿಯನ್ನು ಕಾರ್ಯದಲ್ಲಿ ಹೇಗೆ ವ್ಯಕ್ತ ಮಾಡಬೇಕು ಎಂಬುದು ಸ್ಪಷ್ಟವಾಗಿರಲಿಲ್ಲ. ಬಾಂಬೆಯ 'ಸ್ನೇಹಸದನ' ಅನಾಥ ಮಕ್ಕಳಿಗಾಗಿ ಆಶ್ರಯಗೃಹಗಳನ್ನು ನಡೆಸುವ ಸಂಸ್ಥೆ. ಅಲ್ಲಿನ ಅನಾಥ ಮಕ್ಕಳಿಗೆ ತಾಂತ್ರಿಕ ವಿದ್ಯೆಯನ್ನು ಹೇಳಿಕೊಡುವ ಕೇಂದ್ರ ಸ್ಥಾಪಿಸಲು ಕಟ್ಟಡ ಬೇಕಾಗಿತ್ತು.

ಅದಕ್ಕೆ ಬೇಕಾದ ಹಣ ಸಂಗ್ರಹಣೆ ಮಾಡಲು ಸಮಯ, 'ಚಳಕ' ಸ್ನೇಹ ಸದನದ ಬಳಿ ಇರಲಿಲ್ಲ. ಆ ಹಣ ಸಂಗ್ರಹಿಸಿಕೊಡುವ ಕಾರ್ಯವನ್ನು Cry ಕೈಗೆತ್ತಿಕೊಂಡಿತು.

ಜಾಹಿರಾತು ಸಂಸ್ಥೆಯಲ್ಲಿ ಕೆಲಸ ಮಾಡುವ Cryನ ಸದಸ್ಯರೊಬ್ಬರು ನೋಡಲು ತುಂಬಾ ಆಕರ್ಷಕವಾದ ಇಟ್ಟಿಗೆಯೊಂದನ್ನು ಕಲ್ಪಿಸಿದರು. ಆ ಇಟ್ಟಿಗೆಯನ್ನು ಅಪಾರ ಸಂಖ್ಯೆಯಲ್ಲಿ ಮುದ್ರಿಸಿ 'ಇಟ್ಟಿಗೆಯೊಂದನ್ನು ಕೊಂಡು ಶಾಲೆಯೊಂದನ್ನು ಕಟ್ಟಿ' ಎಂಬ ಘೋಷಣೆಯೊಂದಿಗೆ CRY ಪ್ರಚಾರ ನಡೆಸಿತು. ನಗರದ ಶಾಲೆಗಳ ಹಣವಂತ ಮಕ್ಕಳನ್ನು ಒಂದೊಂದು ಇಟ್ಟಿಗೆ ಕೊಳ್ಳುವಂತೆ ಪ್ರುಸಲಾಯಿಸಿತು. ಮಕ್ಕಳಿಗೆ ಅದೊಂದು ಕಣ್ಣೆದುರು ಕಾಣುವಂತಹ CONCRETE ಆದಂತಹ ಗುರಿಯೆನಿಸಿತು. ಮಾರಾಟದಿಂದ ಸುಮಾರು 3 ಲಕ್ಷ ಸಂಗ್ರಹವಾಯಿತು. ಆ ಹಣವನ್ನು ಮೂಲಸ್ಫೂರ್ತಿಯನ್ನಾಗಿಟ್ಟುಕೊಂಡು ಇನ್ನಷ್ಟು ಹಣ ಸಂಗ್ರಹಿಸಿ ತಾಂತ್ರಿಕ ಶಾಲೆಯ ಕಟ್ಟಡವನ್ನು ಕಟ್ಟಲಾಯಿತು.

ಈ ಮೊದಲ ಯತ್ನದಲ್ಲಿನ ಯಶಸ್ಸು CRY ತನ್ನ ಕ್ಷಿತಿಜವನ್ನು ವಿಸ್ತರಿಸಿಕೊಳ್ಳಲು ಪ್ರೇರೇಪಣೆಯಾಯಿತು. ಸುದ್ದಿ ಹರಡಿದಂತೆ ಹೆಚ್ಚು ಹೆಚ್ಚು ಜನ ಕಲಾವಿದರು ಹಾಗೂ ಇತರ ಕಸಬಿನವರೂ ಸಹ ತಮ್ಮ ವೃತ್ತಿ ನೈಪುಣ್ಯತೆಯನ್ನು ನೆರವು ನೀಡಲು ಮುಂದಾದರು. 1981ರಲ್ಲಿ CRY ಅನೇಕ ಕಲಾವಿದರನ್ನು ಗ್ರೀಟಿಂಗ್ ಕಾರ್ಡೊಂದನ್ನು ರಚಿಸಿಕೊಡಲು ಅಥವಾ ಈಗಾಗಲೇ ಮಾಡಿರುವ ಪೇಂಟಿಂಗ್‌ನ್ನೇ ಗ್ರೀಟಿಂಗ್ ಕಾರ್ಡಾಗಿ ಬಳಸಲು ಅನುಮತಿ ನೀಡುವಂತೆ ಕೇಳಿಕೊಂಡಿತು. ಬಹುಬೇಗ ಈ ಕಾರ್ಡುಗಳ ಮಾರಾಟ ಆರಂಭವಾಯಿತು. "ಒಂದು CRY ಕಾರ್ಡ್ ಕೊಂಡು, ಒಂದು ಮಗುವಿಗೆ ಭವಿಷ್ಯ ನೀಡಿ".... ಜನ ಅಪಾರ ಉತ್ಸಾಹದಿಂದ ಉತ್ತರಿಸಿದರು. ಈ ಕಾರ್ಡಿನಿಂದ ಬಂದ ಹಣವನ್ನು ಈಗಾಗಲೇ ಮಕ್ಕಳ ಒಳಿತಿಗಾಗಿ ಕೆಲಸ ಮಾಡುತ್ತಿರುವ ಸಂಸ್ಥೆಗಳಿಗೆ ಹಂಚಬೇಕೆಂದು ನಿಶ್ಚಯವಾಯಿತು. "ಪರಿವರ್ತನ್" ರಾಮಗಢ, ಮಹಾರಾಷ್ಟ್ರದ ಬುಡಕಟ್ಟು ಮಕ್ಕಳು ಹಾಗೂ ಹೆಂಗಸರಿಗೆ ವಿದ್ಯಾಶಿಕ್ಷಣ ನೀಡುವ ಸಂಸ್ಥೆ, "ಪ್ರೇರಣಾ" ಬೊಂಬಾಯಿಯ ವೇಶ್ಯೆಯರ ಮಕ್ಕಳಿಗೆ ಪೌಷ್ಟಿಕ ಆಹಾರದ ಹಾಗೂ ಶಿಕ್ಷಣದಾನದ ಕಾರ್ಯದಲ್ಲಿ ತೊಡಗಿರುವ ಸಂಸ್ಥೆ. ಇಂಥ ಅನೇಕ ಸಂಸ್ಥೆಗಳು CRY ಕಾರ್ಡು ಗಳಿಂದ ಬಂದ ಹಣವನ್ನು ಪಡೆದವು.

ಹೆಸರಾಂತ ಕಲಾವಿದರಾದ ಎನ್. ಎಸ್. ಬೇಂದ್ರೆ, ಜೆಹಾಂಗೀರ್ ಸಬಾವಾಲಾ ಮುಂತಾದ ಕಲಾವಿದರು CRY ಕಾರ್ಡುಗಳ ಏರುತ್ತಿರುವ ಬೇಡಿಕೆಯನ್ನು ಪೂರೈಸಲು ಮುಂದಾದರು. CRY ಕಾರ್ಡುಗಳ ಸಂಖ್ಯೆ ಹೆಚ್ಚಾಗಿ, ಜೊತೆಗೆ ಕ್ಯಾಲೆಂಡರುಗಳೂ ಕೂಡ ಸೇರಿಕೊಂಡವು. CRYನ ಸದಸ್ಯರು ಇದನ್ನು ಜನತೆಗೆ ವಿಕ್ರಯಿಸಲು ಶ್ರಮಿಸಿದರು. ಈ ವರ್ಷದ ಈ ಕಾರ್ಡುಗಳ ಕ್ರಯದ ಉತ್ಪನ್ನ ಸುಮಾರು 20 ಲಕ್ಷ ಎಂದು ಅಂದಾಜು ಮಾಡಲಾಗಿದೆ.

ಮತ್ತೆ 1988ರಲ್ಲಿ CRY ದೊಡ್ಡ ಪ್ರಮಾಣದ ನಿಧಿ ಸಂಗ್ರಹಣ ಅಭಿಯಾನವನ್ನು ಹಮ್ಮಿಕೊಂಡಾಗ ಸಹಜವಾಗಿಯೇ ಅದು ಕಲೆಗೆ ಸಂಬಂಧಿಸಿತ್ತು. 1987ರ ತಿಂಗಳುಗಳಲ್ಲಿ CRY ಸದಸ್ಯರು ಭಾರತದ 150 ಕಲಾವಿದರನ್ನು ಭೇಟಿಯಾಗಿ ಒಂದೊಂದು ಕೃತಿಯನ್ನು ದಾನ ನೀಡುವಂತೆ ಕೇಳಿಕೊಂಡರು.

ಕಲಾವಿದರು CRY ಮನವಿಗೆ ಹಾರ್ದಿಕವಾಗಿ ಬಿಚ್ಚು ಮನಸ್ಸಿನಿಂದ ಉತ್ತರಿಸಿದರು. ರಂಜಿತವಾದ ಕ್ಯಾನ್‌ವಾಸ್‌ಗಳೂ, ಕೈಚಳಕದ ಕೆತ್ತನೆಯ ಶಿಲ್ಪಗಳೂ ಭಾರತದ ಎಲ್ಲೆಡೆಯಿಂದ ಬಂದಿಳಿದುವು. ಅನೇಕ ಅನಿವಾಸಿ ಭಾರತೀಯ ಕಲಾವಿದರೂ ಸಹ ತಮ್ಮ ಕೃತಿಗಳನ್ನು ಕಳುಹಿಸಿ ಕೊಟ್ಟರು.

ಕಾಣಿಕೆಯಾಗಿ ಬಂದ ಚಿತ್ರ, ಶಿಲ್ಪಗಳ ಮೌಲ್ಯವನ್ನು ಗುರುತಿಸಿದ CRY ಈ ಸಮಕಾಲೀನ ಕೃತಿಗಳ ಪ್ರದರ್ಶನವೊಂದನ್ನು ದೇಶದ ಮುಖ್ಯ ಪಟ್ಟಣಗಳಲ್ಲಿ ನಡೆಸಲು ಯೋಜಿಸಿತು. ಪ್ರತೀ ಕೃತಿಯ ಮೌಲ್ಯವನ್ನು ಗಣಿಸಿ ಸೂಕ್ತಬೆಲೆಗೆ ಮಾರಾಟಕ್ಕೆ ಇಡಲಾಯಿತು. ಜೊತೆಗೆ ಆ ಕೃತಿಗಳ ಕ್ಯಾಟಲಾಗ್, ಬಣ್ಣದ ಪ್ರತಿಗಳು, ಕಲಾವಿದರ ವಿಳಾಸ, ದೂರವಾಣಿ ಇತ್ಯಾದಿ ವಿವರಗಳಿರುವ ಪುಸ್ತಕ ಪುಸ್ತಕ ಇವನ್ನೆಲ್ಲ ಮುದ್ರಿಸಿ ಮಾರಲಾಯಿತು. ಇದರಿಂದ

ಬರುವ ಹಣದೊಂದಿಗೆ CRY ಹೊಸ ಹೆಜ್ಜೆಗಳನ್ನಿಡುವ ಭರವಸೆ ತೋರಿದೆ.

ಈಗಾಗಲೇ 3 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಸಹಾಯ ನೀಡುತ್ತಿರುವ CRY ಇನ್ನಷ್ಟು ಲಕ್ಷ ಲಕ್ಷ ಸಂಖ್ಯೆ ಹಸಿದ ಅವಿದ್ಯಾವಂತ, ಶೋಷಿತ, ಭವಿಷ್ಯವೇ ಮಸುಕಾಗಿರುವ ಮಕ್ಕಳಿಗೆ ಬೆಳಕನ್ನು, ಬಾಳನ್ನು ನೀಡುವ ದಿಶೆಯತ್ತ ಧಾವಿಸುತ್ತಿದೆ.

ಕಲೆಯ ಅಂತ್ಯ, ಗುರಿ ಇದೇ ಆಗಬೇಕೇನು ಎಂದರೆ ಹೌದೆನ್ನಲಾರೆ. ಇದೂ ಸೇರಿದರೆ ಚೆನ್ನು! ಕಲೆ ಕಲಾಕೃತಿಯ ಚೌಕಟ್ಟಿನೊಳಗೆ ಸೌಂದರ್ಯ ಸೀಮೆಯ ದ್ವೀಪವಾಗಿ ನಿಲ್ಲುವುದಕ್ಕಿಂತ ಇದು ವ್ಯಾಪಕವಾದದ್ದು; ಕಲಾಕ್ರಿಯೆಯ ಆಳ ಹರವು ಹೆಚ್ಚಿಸುವಂಥಾದ್ದು; ನಾವು ಕಲಾವಿದರು ಮಾತು ಮಾತಿಗೊಮ್ಮೆ ನೆಂಚಿಕೊಳ್ಳುವ ಮಾನವೀಯತೆ ಯೆಂಬ ಪದಕ್ಕೆ ಜೀವ ತರುವಂಥಾದ್ದು.

ಇಲ್ಲಿ ಕಲಾವಿದನ ಪಾತ್ರ ಎಷ್ಟು ಎಂಬ ಪ್ರಶ್ನೆ ಹೊರಟೀತು, ಕಲಾವಿದನ ಈ ಕ್ರಿಯೆಯೂ ಸಹ ಪರೋಕ್ಷವಲ್ಲವೇ ಎಂಬ ಮಾತೂ ಸಹ ಪರೋಕ್ಷ ನಿಜ, ಒಂದರ್ಥದಲ್ಲಿ! ಕಲಾವಿದನ ಪಾತ್ರ ಎಷ್ಟು ಅಂದರೆ ಒಂದಷ್ಟು ಗ್ರಹಿಕೆಗೆ ದಕ್ಕುವಷ್ಟು. CRY ನಂಥ ಸಂಸ್ಥೆಯೊಂದಿಗೆ ಸಹಕರಿಸುವ ಕಲಾವಿದರೂ ಸಿಕ್ಕು ಇಂಥದ್ದೊಂದು ಕಾರ್ಯ ಸಾಧ್ಯವಾಯಿತೆಂಬುದರಿಂದ ಇದೊಂದು ಉದಾಹರಣೀಯ ಪ್ರಸಂಗ. ○

—ರವಿ

ಕರ್ನಾಟಕದಲ್ಲಿ ಮಹಿಳಾ ಮತದಾರರ ಸಂಖ್ಯೆ 1 ಕೋಟಿ 39ಲಕ್ಷ 32ಸಾವಿರದ 353. ಹೆಚ್ಚೂ ಕಮ್ಮಿ ಒಟ್ಟು ಮತದಾರರಲ್ಲಿ ಅರ್ಧದಷ್ಟು ಭಾಗ. (2 ಕೋಟಿ 85 ಲಕ್ಷದ 53 ಸಾವಿರದ 345). ಈ ಬಾರಿ 18 ರಿಂದ 21 ವರ್ಷ ವಯೋಮಾನದವರಿಗೆ ವೋಟು ಹಾಕುವ ಪ್ರಥಮ ಅವಕಾಶ. ಈ ಹೊಸ ಮತದಾರರ ಸಂಖ್ಯೆಯೇ 23,54,482 ಇದೆ. ಇವರಲ್ಲಿ 11,24,867 ಮಂದಿ ಯುವತಿಯರು. ಈ ಯುವ ಜನರು ಒಟ್ಟು ಮತದಾರರಲ್ಲಿ ಶೇಕಡ 12.5ರಷ್ಟಾಗುತ್ತಾರೆ. ಕಳೆದ ಚುನಾವಣೆಯಲ್ಲಿ ಶೇಕಡ 55.8ರಷ್ಟು ಮಹಿಳೆಯರು ಮತ ಚಲಾಯಿಸಿದ್ದರು.



ಸಮರದ ಕಹಳೆ ಮೊಳಗಿದಾಗ ಲೀನಾ ಒಗೊರೊಡ್ನಿಕೊವಾಳಿಗೆ ಮದುವೆಯಾಗಿ ಹತ್ತು ತಿಂಗಳಾಗಿತ್ತು.

ಪ್ರೇಮದ ಪಾಶದಲ್ಲಿ ಅವಳು ಸಿಕ್ಕಿಬಿದ್ದದ್ದು ಆಕಸ್ಮಿಕವೇ. ಕಾರ್ಮಿಕರ ನಗರದಲ್ಲಿ ಸ್ಥಳೀಯರ ಪ್ರತಿಭಾ ಪ್ರದರ್ಶನವಿತ್ತು. ಗಾಯಕರು, ನೃತ್ಯ ಕಲಾವಿದರಲ್ಲದೆ ಶೌರ್ಯ ಪ್ರದರ್ಶಿಸುವವರೂ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವವರಿದ್ದರು. ಜಿಲ್ಲೆಯ ಕ್ರೀಡಾ ಮಂಡಳಿಯು ಲೀನಾಳನ್ನು ಕಲಾ ವಿಮರ್ಶೆಗೆಂದು ಕಳುಹಿಸಿತ್ತು.

ಪ್ರದರ್ಶನ ನಡೆಯುವ ಸ್ಥಳಕ್ಕೆ ಹೋಗಲು ಲಾರಿಯ ವ್ಯವಸ್ಥೆ ಮಾಡಲಾಗಿತ್ತು. ಯಾರನ್ನೂ ಕೇಳದೆ ಅಥವಾ ಯಾರ ಆಹ್ವಾನಕ್ಕೂ ಕಾಯದೆ ಲೀನಾ ಲಾರಿ ಏರಿ ಕುಳಿತಳು. ಲಾರಿಯಲ್ಲಿ ಇದ್ದವರಲ್ಲಿ ಪುರುಷರ ಸಂಖ್ಯೆಯೇ ಹೆಚ್ಚು. ಲೀನಾಳಿಗಂತೂ ಅವರೆಲ್ಲರೂ ಅಪರಿಚಿತರೇ.

ಚರ್ಮದ ಕೋಟು ಅಥವಾ ರೈನ್‌ಕೋಟ್ ಧರಿಸಿದ್ದ ಸಂಗಾತಿಗಳು (ಕಾಮ್‌ರೇಡ್ಸ್) ಲಾರಿಯಲ್ಲಿ ತಮ್ಮದೇ ಜಗತ್ತಿನಲ್ಲಿ ಮುಳುಗಿಹೋಗಿದ್ದರು. ಅಂದವಾಗಿ ಉಡುಪು ತೊಟ್ಟುಕೊಂಡಿದ್ದ ಲೀನಾ ತನ್ನ ಪಾಡಿಗೆ ತಾನು ಲಾರಿಯ ಒಂದು ತುದಿಯಲ್ಲಿ ಕೂತಿದ್ದಳು. ಸಂಗಾತಿಗಳು ಹಾಸ್ಯ ಚಟಾಕಿ ಹಾರಿಸುತ್ತ, ಗಟ್ಟಿಯಾಗಿ ನಗುತ್ತಾ ಮಾತಾಡಿಕೊಳ್ಳುತ್ತಿದ್ದರು. ಅವರಿಗೆ ಲೀನಾ ಅಲ್ಲಿದ್ದಾಳೆಂಬ ಪರಿವೇ ಇದ್ದಂತಿರಲಿಲ್ಲ.

ಬಿಸಿಲಿನ ಝಳ. ಆದರೆ ಆಗಸದಲ್ಲಿ ದಿಢೀರನೇ ಕಪ್ಪು ಮೋಡ ಕಾಣಿಸಿಕೊಂಡಿತು. ಅದು ದೊಡ್ಡದಾಗುತ್ತಾ ಹೋಯಿತು. ತತ್‌ಕ್ಷಣ ಮಳೆ ಬೀಳಲಾರಂಭಿಸಿತು. ಆಕಾಶದಿಂದ ನೀರಿನ ಗೋಡೆ ಬಿದ್ದಂತಾಯಿತು. ಲೀನಾಳ ಬಟ್ಟೆ ತೊಯ್ದು ಹೋಯಿತು. ತಲೆ ಮೇಲೆ ನೀರಿನ ಪ್ರವಾಹವೇ ಹರಿದಂತಾಗಿ ಮುಖದ ಮೇಲೂ ತೊಟ್ಟಿಕ್ಕತೊಡಗಿತ್ತು. ರೈನ್‌ಕೋಟ್ ಧರಿಸಿದ್ದ ಸಂಗಾತಿಗಳು ಹೆಚ್ಚು ತೊಯ್ಸಿಕೊಳ್ಳಲಿಲ್ಲ.

ಇದ್ದಕ್ಕಿದ್ದಂತೆ ಆ ಸಂಗಾತಿಗಳಲ್ಲಿ ಒಬ್ಬ ಲೀನಾಳತ್ತ ಸರಿದು, ಅವಳ ಪಕ್ಕ ಕೂತು ತನ್ನ ರೈನ್‌ಕೋಟ್‌ನಿಂದ ಅವಳನ್ನು ಮುಚ್ಚಿದ. ಇಬ್ಬರೂ ಅವನ ಕೋಟಿನೊಳಗೆ ಅಡಗಿಹೋದರು. ಲೀನಾಳಿಗೆ ಒಮ್ಮೆಲೇ ಉಸಿರು ಕಟ್ಟಿದಂತಾಯಿತು. ಅವನ ಶ್ವಾಸ ಅವಳ ಮೇಲೆ ನೇರವಾಗಿ 'ದಾಳಿ' ಮಾಡತೊಡಗಿದಾಗ ಅವಳು ಚಳಿಯಲ್ಲಿಯೂ ಬೆವರಿದಳು. ಅವನ ಹೃದಯ ಬಡಿತ ಅವಳ ಹೃದಯವನ್ನು ಮುಟ್ಟುತ್ತಿತ್ತು. ಏನಾಗುತ್ತಿದೆ ಎಂದು ಲೀನಾ ಯೋಚಿಸುವ ವೇಳೆಗೆ ಅವರು ತಲಪಬೇಕಾಗಿದ್ದ ಸ್ಥಳ ಬಂದು ಬಿಟ್ಟಿತು.

ರಷ್ಯನ್ ಕತೆ

ರೈನ್‌ಕೋಟಿನಂಥ 'ಕೋಣೆ'ಯಿಂದ ಇಬ್ಬರೂ ಹೊರ ಬಂದಾಗ ಆಕಾಶ ಸ್ವಚ್ಛವಾಗಿತ್ತು. ಸೂರ್ಯನ ಕಿರಣ ಅವರ ಮುಖದ ಮೇಲೆ ಬಿದ್ದಿತು. ಅಷ್ಟೆಲ್ಲ ಮಳೆ ಎಲ್ಲಿ ಹೋಯಿತು? ಮಳೆ ಇಷ್ಟು ಬೇಗ ನಿಂತು ಹೋಯಿತೆ ಎಂದೆಲ್ಲ ಲೀನಾ ಯೋಚಿಸಲಾರಂಭಿಸಿದಳು. ಬಹುಶಃ ಪ್ರೀತಿ, ಪ್ರೇಮದ ಮೊದಲ ಮೆಟ್ಟಿಲ ಮೇಲೆ ಅವಳು ನಿಂತಿದ್ದಳೇನೋ, ಅವಳು ಯಾರನ್ನೂ ಪ್ರೀತಿಸಿರಲಿಲ್ಲ. ಪ್ರೇಮವೆಂದರೇನೆಂದೇ ಅವಳಿಗೆ ತಿಳಿದಿರಲಿಲ್ಲ. ಇದು ಮೊದಲ ನೋಟದ ಪ್ರೇಮವಿರಬಹುದು.

★ ★ ★ ★

ಲೀನಾಳಿಗೆ ಅವಳದೇ ಆದ ಒಂದು ಗೂಡು ದೊರೆಯಿತು. ಅದೊಂದು ಪುಟ್ಟ ಮನೆಯಾದರೂ ಲೀನಾಳಿಗೆ ಅಲ್ಲಿ ಬದುಕು ಎಲ್ಲವನ್ನು ಕೊಟ್ಟಿತ್ತು. ಜಗತ್ತಿನಲ್ಲಿ ತಾನು ಮತ್ತು ಡಾನ್ ಇಬ್ಬರೇ ಇರುವುದೇನೋ ಎಂಬ ಭಾವನೆ ಅವಳಿಗೆ ಮೂಡಿತ್ತು. ಜೀವನೋತ್ಸಾಹ ಎಲ್ಲೆ ಮೀರಿತ್ತು. ಹೆಜ್ಜೆ ಊರಿದ್ದಲೆಲ್ಲಾ ಆನಂದದ ಬುಗ್ಗೆ ಹರಿಯುತ್ತಿತ್ತು. ಸಂತೋಷ, ಸಮಾಧಾನ, ತೃಪ್ತಿ ಅವಳಿಗೆ ದೊರಕಿತ್ತು. ಪ್ರೀತಿಸುವ ಗಂಡ, ಸಂತಸದ ಗೂಡು.... ಅವಳಿಗೆ ಪ್ರಪಂಚ

ವೆಲ್ಲಾ ಆನಂದದ ಸಾಗರವಾಗತೊಡಗಿತ್ತು. ಆ ಪ್ರೀತಿಯು ಲೀನಾಳನ್ನು ಸಂಪೂರ್ಣವಾಗಿ ಬದಲಿಸಿಬಿಟ್ಟಿತ್ತು. ಗೃಹಿಣಿಯಾಗಿ ಅವಳು ಪರಮಸುಖಿಯಾದಳು. ಅದರಲ್ಲೇ ಅವಳು ಆನಂದ ಕಂಡುಕೊಂಡಳು. ಇದು ಹತ್ತು ತಿಂಗಳವರೆಗೆ ನಿರಾತಂಕವಾಗಿ, ಅವ್ಯಾಹತವಾಗಿ ಸಾಗಿತು. ಆಗಲೇ ಸಮರದ ಗಂಟೆ ಬಾರಿಸಿದುದು.

★ ★ ★ ★

ಅವನಿಗೆ ಕರೆ ಬಂದಿತು. ಲೀನಾಳಿಗೆ ದಿಗ್ಭ್ರಮೆ. ಜಗತ್ತಿನಲ್ಲಿ ಅವನಿಗೆ ಅವಳು ಮಾತ್ರವಲ್ಲ; ಇನ್ನೂ ಮುಖ್ಯ ವಿಚಾರಗಳಿವೆ.... ಕರೆ ಬಂದ ತಕ್ಷಣ ಅವನು ಹೊರಡಲು ಸಿದ್ಧತೆ ಮಾಡಿಕೊಳ್ಳಲಾರಂಭಿಸಿದ. ಸಮರ ಸಿದ್ಧತೆ ಮೊದಲ ಕರ್ತವ್ಯ. ನಂತರ ಉಳಿದದ್ದು. ಅವಳ ಪ್ರಶ್ನೆಗಳಿಗೂ ಕೂಡ ಅವನು ಸರಿಯಾಗಿ ಉತ್ತರಿಸಲಿಲ್ಲ, ಅವನು ಈಗ ಅವಳ ಪ್ರೇಮಿಯಲ್ಲ, ದೇಶ ರಕ್ಷಣೆಗೆ ಹೊರಟ ಯೋಧ. ಅವನ ಚಿಂತೆ ಎಲ್ಲಾ ಯುದ್ಧಭೂಮಿಯತ್ತಲೇ....

ಲೀನಾ ಸ್ವಲ್ಪ ಹೊತ್ತು ದಿಗ್ಮೂಢಳಾಗಿ ಕುಳಿತಿದ್ದಳು. ಅವಳು ಕ್ರೀಡಾಪಟುವಲ್ಲವೆ ? ಕ್ರೀಡಾಮನೋಭಾವ ಅವಳ ರಕ್ತದಲ್ಲಿ ಹರಿಯುತ್ತಿಲ್ಲವೆ ? ಗಂಡ ಸಮರಕ್ಕೆ ಹೊರಟಾಗ ಕಣ್ಣೀರಿಡುತ್ತ ಕೂರುವುದೆ ? ಲೀನಾಳಂಥವಳಿಗೆ ಅದು ಸರಿಯಲ್ಲ, ಅವನು ಎಷ್ಟೊಂದು ದೃಢ ಮನಸ್ಕನಾಗಿ ಹೊರಟಿದ್ದಾನೆ.... ತಾನು ಹೀಗೆ ಕೂರುವುದೆ ? ಲೀನಾಳ ಸುಪ್ತಚೇತನ ಬಡಿದೆಬ್ಬಿಸಿತು. ಅವಳು ಕಾರ್ಯೋನ್ಮುಖಳಾದಳು. ಅವನಿಗೆ ಹೊರಡಲು ನೆರವಾಗಿ ಅವನನ್ನು ರೈಲು ನಿಲ್ದಾಣಕ್ಕೆ ಒಯ್ದಳು. ಅವನ ಮುಖದಲ್ಲಿ ಸಮಾಧಾನದ ಛಾಯೆ ಕಂಡಿತು. ಅವಳ ಕಣ್ಣಲ್ಲಿ ಕಣ್ಣಿಟ್ಟು ಕೇಳಿದ "ನಾನು ಹೊರಟುಹೋದ ಮೇಲೆ ಏನು ಮಾಡುವೆ ?" ಅವಳು ವಿಚಲಿತಳಾಗದೆ ಹೇಳಿದಳು ಇನ್ನೂ ಏನೂ ಯೋಚಿಸಿಲ್ಲ". "ಯಾವುದೇ ಕಾರಣಕ್ಕೂ. ಹುಚ್ಚು ವಿಚಾರ ಬೇಡ" ಎಂದು ಹೇಳಿ ಅವನು ರೈಲು ಹತ್ತಿದ.

ಲೀನಾ ಮನೆಗೆ ಬಂದಾಗ ಅದು ಬಿಕೋ ಎನ್ನುತ್ತಿತ್ತು. ಹತ್ತು ತಿಂಗಳು ಸ್ವರ್ಗವಾಗಿದ್ದ ಮನೆ ಈಗ ಏನೇನೂ ಅಲ್ಲವೆನಿಸಿತು. ಅವನಿಲ್ಲದ ಒಂದು ಕ್ಷಣ ಕೂಡ ಇರಲಾರೆ, ಎರಡು ವರ್ಷವಾಗಬಹುದೆಂದ.... ಅಬ್ಬಾ! ಹೇಗೆ ಬದುಕುವುದು ?".... ಲೀನಾಳ ತಲೆ ಸುತ್ತಲಾರಂಭಿಸಿತು.

ಅವಳು ಕುಸಿದಳು. ಅವಳು ನೆಲದ ಮೇಲೆ ಹರಡಿದ್ದ ಸಾಮಾನುಗಳನ್ನು ದಿಟ್ಟಿಸಿದಳು. ಕಣ್ಣುಗಳು ಮಿಂಚಲಿಲ್ಲ; ತುಟಿ ಒಣಗಿ ಹೋಗಿತ್ತು.... ಒಂದು ಕ್ಷಣವಷ್ಟೆ.... ಅದೇ ತುಟಿಗಳಲ್ಲಿ ನಗೆ ಮಿಂಚಿತು. ಅವಳು ತಲೆ ಎತ್ತಿದಳು. ಈಗ ಅವಳ ಕಣ್ಣಿನಲ್ಲಿ ಬೆಳಕು.... ಅದು ಪ್ರಜ್ವಲಿಸಿತು..... ಅವನಿಗಾಗಬಹುದಾದ ಗತಿ ನನಗೂ ಎಂದು ಲೀನಾ ಗೊಣಗಿಕೊಂಡಳು.

ಲೀನಾ ಕೂಡಲೇ ಕಾರ್ಯೋನ್ಮುಖಳಾದಳು. ಅವಳು ಗುರಿ ಕಂಡುಕೊಂಡಿದ್ದಳು. ಅದರತ್ತ ಸಾಗಬೇಕಲ್ಲ.... ಮೊದಲು ಮನೆಯನ್ನು ಒಪ್ಪವಾಗಿಟ್ಟಳು. ತನಗಿಂತ ಮೊದಲೆ ಅವನು ಬಂದರೆ.... ಮನೆಯ ಬೀಗದ ಕೈಯನ್ನು ಸೂಪರಿಂಟೆಂಡೆಂಟರಿಗೆ ನೀಡಿದಳು. ತನ್ನ ಸ್ವರ್ಗ ಬಿಟ್ಟು ಸಮರಕ್ಕಾಗಿ ಉದ್ಯೋಗ ನೀಡುವ ಅಧಿಕಾರಿಗಳ ಕಚೇರಿಯತ್ತ ಸಾಗಿದಳು. ಅವಳ ಮನಸ್ಸು ದೃಢವಾಗಿತ್ತು. ಬದುಕಿನ ಗೊತ್ತು ಗುರಿ ಕಂಡುಕೊಂಡಿದ್ದಳು. ಅದರತ್ತ ದಾಪುಗಾಲು ಹಾಕಲಾರಂಭಿಸಿದಳು.... ಸಮರದ ಕಹಳೆ ಅವಳನ್ನು ಇನ್ನೂ ವೇಗವಾಗಿ ಹೋಗುವಂತೆ ಮಾಡಿತು.

○



ನಿರಾಶ್ರಿತರ ಶಿಬಿರಗಳಲ್ಲಿ ಬಲಾತ್ಕಾರಿತ ಮಹಿಳೆಯರು

—ಜರ್ಮೇನ್ ಗ್ರೀಯರ್

'ಜೀನೋಸೈಟ್' ಇಬ್ಬಗೆಯಲ್ಲಿ ವ್ಯಕ್ತವಾಗುತ್ತದೆ. ಗಂಡಸರ ಕೊಲೆ, ಕೈಗೂಸುಗಳ ಹತ್ಯೆ—ಆದರಲ್ಲೂ ಮುಂದೊಮ್ಮೆ ಮುಂದಾಳಾಗುವ ಸಾಧ್ಯತೆ ಇರುವ ಕೂಸು ಮೊದಲು ಮುಗಿಸಲಾಗುತ್ತದೆ. ಇದರ ಜೊತೆಗೆ ಗೆದ್ದವರ ವೀರ್ಯದಿಂದ ಹೆಂಗಸರ ಗರ್ಭ ತುಂಬುವ ವಿಕೃತ ಸಂಪ್ರದಾಯವೂ ಸೇರಿಕೊಳ್ಳುತ್ತವೆ. ಪಶ್ಚಿಮ ಪಾಕಿಸ್ತಾನಿ ಸೇನೆ ಪೂರ್ವ ಬಂಗಾಲದಲ್ಲಿ 'ಜೀನೋಸೈಟ್'ನ ಈ ಎಲ್ಲ ಲಕ್ಷಣಗಳನ್ನು ಅಕ್ಷರಶಃ ಪಾಲಿಸಿತು. ಯುದ್ಧಾಪರಾಧಗಳ ವಿಚಾರಣೆಗಳಲ್ಲಿ ಸಿಕ್ಕ ಪುರಾವೆಯ ಪ್ರಕಾರ, ಸೇನೆಯ ಮೇಲ್‌ಅಧಿಕಾರಿಗಳು ಲಿಖಿತ ಪತ್ರಗಳ ಮೂಲಕ ಕೀಳು ಬೆಂಗಾಲಿ ಜನಾಂಗದೊಳಗೆ, ತಮ್ಮ ಶ್ರೇಷ್ಠ ಪಂಜಾಬಿ ರಕ್ತವನ್ನು ಯಥೇಚ್ಛವಾಗಿ ನುಗ್ಗಿಸಲು ಆದೇಶ ನೀಡಿದ್ದರು !

[ಆಸ್ಟ್ರೇಲಿಯ ಸಂಜಾತೆ ಜರ್ಮನ್ ಗ್ರೇರ್ ಸಿಡ್ನಿ, ಕೇಂಬ್ರಿಡ್ಜ್‌ನಲ್ಲಿ ಶಿಕ್ಷಣ ಪಡೆದವಳು. ಷೇಕ್ಸ್‌ಪಿಯರ್‌ನ ಸುಖಾಂತಗಳ ಬಗ್ಗೆ ಅಧ್ಯಯನ ನಡೆಸಿ ಪಿ.ಎಚ್.ಡಿ. ಪಡೆದ ಈಕೆ ಪ್ರಮುಖವಾಗಿ ಮಹಿಳಾ ಅಧ್ಯಯನವನ್ನು ಕುರಿತಂತೆ ಆಸಕ್ತಿಯುಳ್ಳವಳು. ಅವಳ The Female Eunuch, 'The Obstacle Race', 'Sex and Destiny' ಕೃತಿಗಳು ಗಮನಾರ್ಹವಾದವು. ಇಲ್ಲಿ ಪ್ರಕಟವಾಗಿರುವ 'ನಿರಾಶ್ರಿತರ ಶಿಬಿರಗಳಲ್ಲಿ ಮಹಿಳೆಯರ ಅತ್ಯಾಚಾರ' ಲೇಖನವು 1972ರಲ್ಲಿ 'Sunday Times'ನಲ್ಲಿ ಪ್ರಕಟವಾದದ್ದು.

ಶ್ರೀಮತಿ ಬದ್ರುನ್ನೀಸ ಅಹ್‌ಮದ್, ಪಾಕಿಸ್ತಾನಿ ನ್ಯಾಷನಲ್ ಅಸೆಂಬ್ಲಿಗೆ ಚುನಾಯಿತರಾದ ಏಳು ಮಂದಿ ಮಹಿಳೆಯರಲ್ಲಿ ಒಬ್ಬಳು. ಬಾಂಗ್ಲಾದ ಬಿಡುಗಡೆಗೆ ಮೊದಲೇ, ಪಾಕಿಸ್ತಾನಿ ಸೇನೆಗಳ ಕಗ್ಗೊಲೆಗಳಲ್ಲಿ ಅತ್ಯಂತ ಹಾನಿಗೀಡಾದವರು ಹೆಂಗಸರು ಎಂದು ಒತ್ತಿ ಹೇಳಿದ್ದಾಳೆ. ಪಶ್ಚಿಮ ಬಂಗಾಲದಲ್ಲಿ ನಿರಾಶ್ರಿತರ ಯೋಜನೆಯ ವ್ಯವಸ್ಥಾಪಕರಿಗೆ ಸ್ತ್ರೀಯರ ಮೇಲಿನ ಅತ್ಯಾಚಾರದ ಸಮಸ್ಯೆಯ ಪೂರ್ಣ ಅರಿವಿತ್ತು. ಹೀಗಿದ್ದೂ, ತಕ್ಕಮಟ್ಟಿಗೆ ನಿಯಂತ್ರಿಸಿದ ಶಿಬಿರಗಳಲ್ಲೂ ಹೆಂಗಸರ ಮರ್ಯಾದೆ, ಆತ್ಮಗೌರವ ಉಳಿಸಲು ಅವರು ಹೆಚ್ಚೇನೂ ಮಾಡಲು ಸಾಧ್ಯವಿರಲಿಲ್ಲ. ಗಡಿ ದಾಟುವಲ್ಲಿ ಯಶಸ್ವಿಯಾದ ಮಹಿಳೆಯರು ಚೂಪಾದ ಬಿದಿರು, ಮಳೆಗಳಿಂದ, ಬಂದೂಕಿನ ತಿವಿಯುವ ಅಲಗಿನಿಂದ ತೀವ್ರವಾಗಿ ಗಾಯಗೊಂಡಿದ್ದರೂ, ಅವರ ಸ್ಥಿತಿ ಎಷ್ಟೋ ಉತ್ತಮವಿತ್ತು. ಆದರೆ ಪಾಕಿಸ್ತಾನಿ ಸೇನೆಯಲ್ಲಿ ಅಡಿಗೆ ಆಳಾಗಿ, ಕೆಲಸದಾಳಾಗಿ, ಸೂಳೆಯರಾಗಿ ದುಡಿಯಲು ಇಟ್ಟುಕೊಂಡ ಹೆಂಗಸರ ಪಾಡು ನೋಡುವಂತಿರಲಿಲ್ಲ. ಕೆಲವು ಬಾಂಗ್ಲಾದ ಹೆಂಗಸರು, ಶಿಬಿರಗಳಲ್ಲಿ ಶಸ್ತ್ರಚಿಕಿತ್ಸೆ, ಮಾನಸಿಕ ಚಿಕಿತ್ಸೆ ಬೇಕಿರುವ ಹೆಂಗಸರನ್ನು ಹುಡುಕಿ ಹೊರಟಾಗ, ಅತ್ಯಾಚಾರಕ್ಕೊಳಗಾದ ಮಹಿಳೆಯರಾರೂ ಮಾತನಾಡಲಿಲ್ಲ. ಗುಟ್ಟಾಗಿ ಗರ್ಭ ಇಳಿಸಿಕೊಳ್ಳುವವರು, ಇಳಿಸಿಕೊಂಡರು, ಆದರೆ ಸಾರ್ವಜನಿಕವಾಗಿ ಪ್ರಚಾರ ಮಾಡುವ ಎಲ್ಲ ಪ್ರಯತ್ನಗಳು ವಿಫಲವಾದವು. ಕೆಲವು ವಿಶೇಷ ಶಿಬಿರಗಳಲ್ಲಿ ಒಂಟಿಯಾಗಿ ಬಂದಿಳಿದ ಬಾಂಗ್ಲಾದ ಹುಡುಗಿಯರಿಗೆ ಕೈ ಕೆಲಸಗಳ ಕಲಿಸಲಾಗುತ್ತಿತ್ತು—ಆದರೆ, ಅವರ ಬಸಿರು ಉಬ್ಬಿದ್ದು ಕಂಡೊಡನೆ ಸದ್ದಿಲ್ಲದಂತೆ ಬೇರೆಡೆ ಸಾಗಿಸಲಾಯಿತು.

ಬಾಂಗ್ಲಾದೇಶ ಬಿಡುಗಡೆಯಾದ ಎರಡು ದಿನಗಳ ನಂತರ ಡಕ್ಕಾಗೆ ಮದರ್ ತೆರೇಜಾ ಹೋದಾಗ, ಭಾರತೀಯ ಸೇನೆ ಅತ್ಯಂತ ಸಂಕೋಚ, ಮುಜುಗರದಿಂದ ಪಾಕಿಸ್ಥಾನಿಗಳು ಬಂಕರ್‌ನಲ್ಲಿ ಬೆತ್ತಲಾಗಿ ಬಿಟ್ಟುಹೋದ ಮೂರು ಸಾವಿರ ಹೆಂಗಸರನ್ನು ಸುಧಾರಿಸಲು ಒದ್ದಾಡುತ್ತಿದ್ದದ್ದನ್ನು ಕಂಡರು. ಅವರ ನಗ್ನತೆಗೆ ಪಾಕಿಸ್ಥಾನಿ ಸೈನಿಕರ ಅಶ್ಲೀಲತೆಯಷ್ಟೇ ಕಾರಣವಾಗಿರಲಿಲ್ಲ. ಆ ಹೆಂಗಸರು ಓಡಿ ಹೋಗದಿರಲೆಂದು, ಆತ್ಮಹತ್ಯೆ ಮಾಡಿಕೊಳ್ಳದಿರಲೆಂದು ಅವರ ಸೀರೆಗಳನ್ನು ಕಿತ್ತುಕೊಳ್ಳಲಾಗಿತ್ತು. ಅವರಲ್ಲಿ ಅನೇಕರು ಒಂದು ಸೀರೆ ಕೊಟ್ಟೊಡನೆ ನೇಣು ಹಾಕಿಕೊಂಡರು. ಮತ್ತೆ ಕೆಲವರು ತಿಂಗಳುಗಟ್ಟಲೆಯ

ಯಥೇಚ್ಛ ಲೈಂಗಿಕ ಅತ್ಯಾಚಾರದಿಂದ ತುಂಬು ಗರ್ಭಿಣಿಯರಾಗಿದ್ದರು. ಮದರ್ ತೆರೇಜಾ ಈ ಸಮಸ್ಯೆಯ ತುರ್ತನ್ನು ಗಮನಿಸಿ ತಮ್ಮ ಸೇವೆಯನ್ನು ಬಾಂಗ್ಲಾಕ್ಕೆ ಮೀಸಲಿಟ್ಟರು. ಅಂತರಾಷ್ಟ್ರೀಯ ವಿಚಾರಣಾ ಸಮಿತಿ; ಕವಿ ಬೇಗಮ್ ಸುಫಿಯಾ ಕಮಲ್ ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯನ್ನು ಕರೆಯಿತು. 'ನಿಯೋಜಿತ ಪೋಷಕ ಸಂಘ' ಗರ್ಭಪಾತಗಳಿಗೆ ಕ್ಲಿನಿಕ್‌ಗಳನ್ನು ತೆರೆಯಿತು. ಮದರ್ ತೆರೇಜಾ ಈ ಹೆಂಗಸರಿಗೆ ತಮ್ಮ 'ದ್ವೇಷದ ಕೂಸು'ಗಳ ನಿರೀಕ್ಷಿಸಲು ವಸತಿ ಒದಗಿಸಿದರು. ಜರ್ಮನಿ, ಸ್ವಿಜರ್‌ಲೇಂಡ್‌ಗಳಲ್ಲಿ ದತ್ತು ತೆಗೆದುಕೊಳ್ಳಲು ಪೋಷಕರನ್ನು ಅರಿಸಲಾಯಿತು.

ಈ ಸಮಸ್ಯೆಯ ಪೂರ್ಣ ಪ್ರಮಾಣದ ಪರಿಣಾಮ ಇಂದಿಗೂ ತಿಳಿದಿಲ್ಲ. ಗಡಿ ಗೆರೆಯ ಹತ್ತಿರದ ತ್ರಿಪುರಾ ಜಿಲ್ಲೆಯ ರೈತಾಪಿಜನ ಪಾಕ್ ಸೈನಿಕರು 'ಹಗ್ಗದಿಂದ ಬಿಗಿದ ಬೆತ್ತಲೆ ಹೆಂಗಸರ ಮೈ ತೊಳೆಯಲು ನದಿಗೆ ತರುತ್ತಿದ್ದ ಸುದ್ದಿ ಹೇಳುತ್ತಾರೆ. ಗಡಿಯತ್ತ ಹೊರಟ ಯುವಕನೊಬ್ಬ, ಮಿಷನ್ ಗನ್ ಕಗ್ಗೊಲೆಯಲ್ಲಿ ಶವಗಳ ಕೆಳಗೆ ಉಳಿದು ಬಚಾವಾದ. ಶವಗಳ ತಳದಿಂದ ಹೊರಗೆ ತೆವಳಿ ಬಂದಾಗ, ಅವನು ಕಂಡದ್ದು ಗುಂಪಿನಲ್ಲಿ ಕೇವಲ ಮುದುಕರು ಮಕ್ಕಳು ಮಾತ್ರ. ಅವರೊಡನೆ ಪ್ರಯಾಣಿಸುತ್ತಿದ್ದ ಹೆಂಗಸರನ್ನು ಎಷ್ಟು ಹುಡುಕಿದರೂ, ಸುಳಿವೂ ಸಿಕ್ಕಲಿಲ್ಲ. 'ದಿ ವರ್ಲ್ಡ್ ಕೌನ್ಸಿಲ್ ಆಫ್ ಚರ್ಚ್' ಈ ಬಗೆಯಲ್ಲಿ ಅಪಹರಿಸಲ್ಪಟ್ಟ ಹೆಂಗಸರ ಸಂಖ್ಯೆಯನ್ನು 200 ಸಾವಿರ ಎಂದು ಅಂದಾಜು ಮಾಡಿದೆ. ಮತ್ತೊಂದು ಅಧಿಕೃತ ಮೂಲ 300 ಸಾವಿರ ಎಂದಿದೆ. ಕೆಲವು ಭಾರತೀಯ ಅಧಿಕಾರಿಗಳು ಅರ್ಧ ಮಿಲಿಯನ್ ಎನ್ನುತ್ತಾರೆ. ಈ ಸಂಖ್ಯೆ ಅವಾಸ್ತವವಾಗಿ ಕಾಣಬಹುದು ಆದರೆ 93, ಸಾವಿರ ಗಂಡಸರು ಒಂಭತ್ತು ತಿಂಗಳು ನಡೆಸಿದ ಕೊಳ್ಳೆ, ಸುಲಿಗೆ ಗಮನಿಸಿದರೆ ಅಸಾಧ್ಯವೆನಿಸುವುದಿಲ್ಲ. ಸತ್ಯ ತಿಳಿದ ಹೆಂಗಸರಾರೂ, ಮಾತನಾಡಲು ಸಿದ್ಧವಿಲ್ಲ.

ಈ ಸಮಸ್ಯೆಯ ಪರಿಣಾಮ ನೋಡಿದರೆ, ಅತ್ಯಾಚಾರ ಪ್ರಕರಣಗಳಲ್ಲಿ ಅನ್ಯಾಯವಾಗಿ ಅತ್ಯಾಚಾರಿಗಿಂತ ಅತ್ಯಾಚಾರಕ್ಕೆ ಒಳಗಾದವಳಿಗೇ ಹೆಚ್ಚು ಅಪಮಾನ, ನಾಚಿಕೆಯುಂಟು ಮಾಡುತ್ತದೆ. ಶೇಕ್ ಮುಜೀಬ್ ಈ ಸಮಸ್ಯೆ ಗಮನಿಸಿ ಹಿಂಸೆಗೆ ಒಳಗಾದ ಹೆಂಗಸರನ್ನು ಯುದ್ಧ ರಮಣಿಯರೆಂದು ಗೌರವಿಸಿ ವಿವಾಹವಾಗಲು, ಬಾಂಗ್ಲಾದೇಶದ ಯುವಕರಿಗೆ ಕರೆ ಕೊಟ್ಟರು. ನೂರಾರು ಯುವಕರು, ಕೆಲವು ಪದವೀಧರರೂ ಕೂಡ ಈ ಕರೆಗೆ ಓಗೊಟ್ಟು ಮುಂದೆ ಬಂದುದಾಗಿ, ಬಾಂಗ್ಲಾದ 'ಸ್ತ್ರೀ ಪುನರ್‌ವಸತಿ ಯೋಜನೆ' ಹೆಮ್ಮೆಯಿಂದ ಬಿತ್ತರಿಸಿದೆ. ಆದರೂ ಲೈಂಗಿಕ ಬಂಧನವನ್ನು, ವೀರಾವೇಶದ ಹೋರಾಟಕ್ಕೆ, ಪ್ರತಿಭಟನೆಗೆ ಹೋಲಿಸುವ ಶೇಕ್‌ರವರ ಪ್ರಯತ್ನ ನಂಬುವಂತಿಲ್ಲ. ಕೇವಲ ಅನುಕಂಪದ ಮೇಲಿನ ಇಂಥ ವಿವಾಹವಾಗಲು, ಜೀವನ ಪೂರ್ತಿಯ ಸಾಂಗತ್ಯಕ್ಕೆ ಶುಭ ಶಕುನವೂ ಅಲ್ಲ. ಬಾಂಗ್ಲಾದ ಹೆಂಗಸರು ಪದೇ ಪದೇ ಬಸಿರುಗಳಲ್ಲಿ ಹಿಂಸಕ ಹೆಣಗಾಟದಲ್ಲಿ ತಲೆ ಎತ್ತದಂತೆ ತುಳಿಯಲ್ಪಟ್ಟಿದ್ದಾರೆ. ಹಾಗೆಂದೇ ತಮ್ಮತ್ತ ಎರಗಿದವರ ಮೇಲೆ ತಿರುಗಿ ಬೀಳುವಂಥ ವೀರಾವೇಶವನ್ನು ಅವರಿಂದ ನಿರೀಕ್ಷಿಸಲು ಸಾಧ್ಯವೇ ಇಲ್ಲ. ಹೆಂಗಸರಿಗೆ ಹೋರಾಡುವ ಪ್ರತಿರೋಧಿಸುವ ತರಪೇತಿ ನೀಡಿ ತಯಾರಿಸಿದ್ದರೆ ಅವರು ಸಮಯ ನೋಡಿ ತಮ್ಮ ಪೀಡಿಸಿದವರನ್ನು ಕೊಲ್ಲಬಹುದಿತ್ತು, ಇಲ್ಲ ಆ ಪ್ರಯತ್ನದಲ್ಲಿ ಸಾಯಲೂ ಹಿಂಜರಿಯಬೇಕಿರಲಿಲ್ಲ. ಹೇಗಿದ್ದೂ ಈ ಹೆಂಗಸರು ಆಯ್ದುಕೊಂಡದ್ದು ಆತ್ಮಹತ್ಯೆಯ ದುರಂತವನ್ನೇ.

ತಮ್ಮ ಹೆಂಗಸರನ್ನು ಅಧಿಕಾರವಿಲ್ಲದ ದಾಸ್ಯದಲ್ಲಿ ಕಟ್ಟಿಟ್ಟು ಪೋಷಿಸಿದ ತಪ್ಪಿಗೆ, ಬಾಂಗ್ಲಾದೇಶ ಬಹು ದೊಡ್ಡ ಬೆಲೆ ತೆರುತ್ತಿದೆ. ಹೆಂಗಸರ ಸಮಾನ ಸ್ಥಾನಮಾನಕ್ಕೆ ಪ್ರಾಮುಖ್ಯತೆ ಕೊಡುವುದಾಗಿ ಶೇಕ್ ಮುಜೀಬ್ ಹೇಳಿದ್ದಾರೆ. ಧರ್ಮದ ಹೆಸರಲ್ಲಿ ಅವರನ್ನು ಅಜ್ಞಾನದಲ್ಲಿ, ಗೃಹಬಂಧನದಲ್ಲಿ ಹಿಡಿಬಿಡುವುದಿಲ್ಲ ಎಂದೂ ಆಶ್ವಾಸನೆ ನೀಡಿದ್ದಾರೆ. ಆದರೆ ಬಹಳಷ್ಟು ಹೆಂಗಸರಿಗೆ ಈ ಆಶ್ವಾಸನೆ ಅಸಾಧ್ಯವಷ್ಟೇ ಅಲ್ಲ, ಕ್ರೂರ ಹಾಸ್ಯವಾಗಿ ಕಾಣುತ್ತಿದೆ.

ಈಗಿನ ಬಾಂಗ್ಲಾದೇಶದ ಅವ್ಯವಸ್ಥೆಯಲ್ಲಿ ಹೊಸ ಅಳುಕು, ಆತಂಕಗಳು ಹಳತರೊಡನೆ ಬೆರೆತು ಸಂಕೀರ್ಣವಾಗುತ್ತಿವೆ. ಮದರ್ ತೆರೇಜಾರ ಪ್ರೀತಿಯ ಆರೈಕೆ ಸಿಕ್ಕವರೂ ಕೂಡಾ ತಡವಾದ ಗರ್ಭಪಾತಕ್ಕಾಗಿ ಸಿಸೇರಿಯನ್ ತಂತ್ರಗಳಲ್ಲಿ ನುರಿತ ಯುರೋಪ್ ಡಾಕ್ಟರ್‌ಗಳೆಡೆಗೆ ಓಡುತ್ತಿದ್ದಾರೆ. ಅನಾಥ ಹೆಂಗಸರು ನಿರ್ಜನ

ಪ್ರದೇಶದಲ್ಲಿ, ಹೆತ್ತ ಪಂಜಾಬಿ ಮಗುವನ್ನು ಎಸೆದು ನಡೆಯುತ್ತಿದ್ದಾರೆ, ಇಲ್ಲ ಕತ್ತು ಹಿಚುಕಿ ಸಾಯಿಸುತ್ತಿದ್ದಾರೆ.

ಎಷ್ಟೋ ಹೆಂಗಸರು ಇಂಥಾ ಮಕ್ಕಳನ್ನು ಪ್ರೀತಿಸಿ ಪೋಷಿಸಿದರೂ ಆ ಮಕ್ಕಳ ರೂಪು ರೇಖೆಗಳು ಅವರನ್ನು ಜೀವನಪರ್ಯಂತ ಬಹಿಷ್ಕರಿಸುತ್ತದೆ. ಮತ್ತೆ ಕೆಲವರು ಸುಳ್ಳು ಹೇಳುತ್ತಾ, 1971ರ ದುಃಸ್ವಪ್ನವನ್ನು ನೆನಪಿನಿಂದ ಅಳಿಸಿಹಾಕಲು ಪ್ರಯತ್ನಿಸುತ್ತಿದ್ದಾರೆ.

ನೀವೆಂದಾದರೂ, ಹೆಂಗಸರು ಆತ್ಮರಕ್ಷಣೆಯಲ್ಲಿ ಸಮರ್ಥರಾಗಿರಬೇಕು, ಗಂಡಸರ ಬಗಲಲ್ಲೇ ಹೋರಾಡಲು ಸಿದ್ಧವಿರಬೇಕು, ತಮ್ಮ ಸ್ವಾತಂತ್ರ್ಯ, ಆತ್ಮವಿಶ್ವಾಸಕ್ಕಾಗಿ ಸಬಲರಾಗಬೇಕು ಎಂಬ ಬಗ್ಗೆ ಅನುಮಾನಿಸಿದ್ದರೆ, (ನಾನೇ ಅನುಮಾನಿಸಿದ್ದುಂಟು) ಸಮಯ ಇಂದು ಸ್ತ್ರೀಯರ ಸಬಲತೆಯ ಅವಶ್ಯಕತೆಯನ್ನು ಪುರಾವೆಗಳೊಡನೆ ಸಿದ್ಧ ಮಾಡಿ ತೋರಿಸಿದೆ. ಲೈಂಗಿಕ ರಾಜಕೀಯ ಅರ್ಥ ಮಾಡಿಕೊಂಡ ಪ್ರತಿಯೊಬ್ಬರೂ ಅತ್ಯಾಚಾರದ ಹಿಂದಿನ ಮನಶಾಸ್ತ್ರ ಹಾಗೂ ರಾಜಕೀಯತೆಯನ್ನು ಪರಿಶೀಲಿಸುವುದು ಅವಶ್ಯಕವಷ್ಟೇ ಅಲ್ಲ, ಅತ್ಯಾಚಾರ ಅಸಾಧ್ಯವಾಗುವಂಥಾ ಕಾರ್ಯನೀತಿಯತ್ತ ದುಡಿಯುವುದೂ ಅವಶ್ಯಕ. ನಾವು ಇಂದಾಗಲಿ, ಮತ್ತೆಂದಾಗಲೀ ದ್ರೌಪದಿಯ ಅಕ್ಷಯವಾದ ಸೀರೆಯನ್ನು, ಧರ್ಮ ಅದ್ಭುತ ರಕ್ಷೆಯನ್ನು ನಂಬಿ ಕೂರಲು ಸಾಧ್ಯವಿಲ್ಲ. ತಲೆ ಹಿಡುಕ ಹಿಂಸಕರು ಖಂಡಿತಾ ಈ ಭೂಮಿಯ ಪಡಕೊಳ್ಳಬಾರದು.

□



ಡಾ|| ವಿ. ಶುಭಾ ಒಂದು ಸಂದರ್ಶನ

● ನೇಮಿಚಂದ್ರ



ಈ ಬಾರಿ 1989ರ 'ಸಿ.ಎಸ್.ಐ.ಆರ್' ಯುವ ವಿಜ್ಞಾನಿ ಪ್ರಶಸ್ತಿ' ಬಂದ ಹತ್ತು ಮಂದಿ ವಿಜ್ಞಾನಿಗಳಲ್ಲಿ ಬೆಂಗಳೂರಿನ ಡಾ|| ವಿ. ಶುಭಾ ಇರುವುದು ಹೆಮ್ಮೆಯ ವಿಷಯ. ಇವರಿಗೆ 'ಭೌತ ವಿಜ್ಞಾನ' ವಿಭಾಗದ ಪ್ರಶಸ್ತಿ ದೊರೆತಿದೆ. ನಲವತ್ತಕ್ಕೂ ಹೆಚ್ಚು ವೈಜ್ಞಾನಿಕ ಪ್ರಬಂಧಗಳನ್ನು ಪ್ರಕಟಿಸಿರುವ ಶುಭಾ, 1982ರಲ್ಲಿ ಎನ್.ಎ.ಎಲ್‌ಗೆ ಸೈಂಟಿಸ್ಟ್ 'ಬಿ' ಆಗಿ ಸೇರಿ ಇದೀಗ ಸೈಂಟಿಸ್ಟ್ 'ಸಿ' ಹುದ್ದೆಯಲ್ಲಿದ್ದಾರೆ. ಸರಳ ವ್ಯಕ್ತಿತ್ವದ ತುಂಬು ಸ್ನೇಹದ ಶುಭಾರವರನ್ನು ಅವರ ಮನೆಯಲ್ಲಿ 'ಅಚಲ' ಭೇಟಿಯಾದಾಗ ನೀಡಿದ ಸಂದರ್ಶನ ಇದು—

ಅಚಲ: ನಿಮ್ಮ ಯಾವ ಸಂಶೋಧನೆಗೆ ಈ ಪ್ರಶಸ್ತಿ ಬಂದಿದೆ ?

ಶುಭಾ: ಅತ್ಯಧಿಕ ಒತ್ತಡ ಹಾಗೂ ಶಾಖದಲ್ಲಿ ಕೆಲವು ವಿಶೇಷ ಲೋಹಗಳು, ಮಿಶ್ರಲೋಹಗಳು, ಲೋಹಗಾಜುಗಳು, ಅರೆನಿರ್ವಾಹಕಗಳು ವರ್ತಿಸುವ ಬಗೆಯನ್ನು ಕುರಿತ ಸಂಶೋಧನೆಗೆ.

ಅಚಲ: ಈ ಪ್ರಶಸ್ತಿಗೆ ಏನಾದರೂ ನಿಬಂಧನೆಗಳಿವೆಯೆ?

ಶುಭಾ: ಹೌದು, ವಯಸ್ಸು 35ರ ಒಳಗಿರಬೇಕು. ಭೌತ ವಿಜ್ಞಾನ, ರಸಾಯನಿಕ ವಿಜ್ಞಾನ, ಇಂಜನಿಯರಿಂಗ್ ವಿಜ್ಞಾನ, ಭೂವಿಜ್ಞಾನ ಇಲ್ಲವೇ ಜೀವಶಾಸ್ತ್ರ ವಿಜ್ಞಾನ— ಈ ಯಾವುದೇ ವಿಭಾಗದಲ್ಲಿನ ಗುರುತರ ಕೊಡುಗೆಯನ್ನು ಗುರುತಿಸಿ ನೀಡುವ ಪ್ರಶಸ್ತಿ ಇದು.

ಅಚಲ: ನೀವು ಈ ವರ್ಷದ ಪ್ರಶಸ್ತಿ ನಿರೀಕ್ಷಿಸಿದ್ದೀರಾ?

ಶುಭಾ: ಖಂಡಿತಾ ಇಲ್ಲ. ಟೆಲಿಗ್ರಾಂ ಬಂದಾಗಲೂ ಸ್ವಲ್ಪಾನೂ ನಂಬಿಕೆ ಬರಲಿಲ್ಲ. ಯಾರೋ ತಮಾಷೆ ಮಾಡ್ತಾ ಇರಬೇಕು ಅಂದುಕೊಂಡೆ.

ಅಚಲ: ನಿಮ್ಮ ಓದು ವಿದ್ಯಾಭ್ಯಾಸ ಬೆಂಗಳೂರಲ್ಲೇ ನಡೆದಿದ್ದಾ ?

ಶುಭಾ: ಹೌದು, ಬೆಂಗಳೂರಿನ ವಿಶ್ವವಿದ್ಯಾಲಯದಿಂದ ಭೌತಶಾಸ್ತ್ರದಲ್ಲಿ ಎಂ.ಎಸ್ಸಿ. ಮಾಡಿದೆ. ನಂತರ ಸಿ.ಎಸ್.ಐ.ಆರ್. ಫೆಲೋಶಿಪ್ ಮೇಲೆ ಎನ್.ಎ.ಎಲ್. ನಲ್ಲೇ 1980ರಲ್ಲಿ ಪಿ.ಎಚ್.ಡಿ. ಮುಗಿಸಿದೆ.

ಅಚಲ: ನಿಮಗೆ ಇಷ್ಟು ಓದುವತ್ತ ವಿಶೇಷ ಸ್ಫೂರ್ತಿ ನೀಡಿದವರು ಯಾರು ?

ಶುಭಾ: ನಮ್ಮ ತಂದೆ. ಅವರು ಓದು, ವಿದ್ಯೆಗೆ ಬಹಳ ಪ್ರಾಮುಖ್ಯತೆ ಕೊಟ್ಟವರು. ಗಣಿತದಲ್ಲಿ ಬಹಳ ಆಸಕ್ತಿ ಇದ್ದವರು. ನನಗೆ ವಿಜ್ಞಾನ ಆಯ್ದುಕೊಳ್ಳೋಕೆ ಪ್ರೋತ್ಸಾಹಿಸಿದವರೂ ಅವರೇ. ಎಷ್ಟು ಸಾಧ್ಯವೋ ಅಷ್ಟೂ ಓದು ಅಂತಾ ಇದ್ದರು. ಐದು ಜನ ಅಣ್ಣಂದಿರು, ಮೂವರು ಅಕ್ಕಂದಿರ ದೊಡ್ಡ ಕುಟುಂಬ ನನ್ನದು, ಅಣ್ಣಂದಿರೆಲ್ಲ ಉನ್ನತ ವ್ಯಾಸಂಗ ಮಾಡಿ ದೊಡ್ಡ ಹುದ್ದೆಯಲ್ಲಿದ್ದಾರೆ. ಅರವತ್ತು ವರ್ಷದ ನನ್ನ ಅಕ್ಕ ಕೂಡಾ ಸ್ವಾತಂತ್ರ್ಯ ಪೂರ್ವದ ಆ ದಿನಗಳಲ್ಲೇ ಪದವಿ ಪಡೆದು, ಶಾಲೆಯೊಂದರಲ್ಲಿ ಪ್ರಾಂಶುಪಾಲರಾಗಿದ್ದರು. ಹಾಗಾಗಿ ನಮ್ಮ ಮನೆಯ ವಾತಾವರಣ, ತಂದೆಯ ಪ್ರೋತ್ಸಾಹ ನನ್ನ ಓದು–ವಿಜ್ಞಾನಕ್ಕೆ ಬಹಳ ಪ್ರಶಸ್ತವಾಗಿತ್ತು.

ಅಚಲ: ಈ ದಿನಗಳಲ್ಲಿ ಮಹಿಳೆಯರು ಓದುವುದು, ಕೆಲಸ ಹಿಡಿಯೋದು ಸಾಮಾನ್ಯವಾಗಿದೆ. ಆದರೂ ಅತ್ಯಧಿಕ ಸಾಧನೆಯ ಮಹಿಳೆಯರ ಸಂಖ್ಯೆ ಬಹಳ ಕಡಿಮೆ. ಇದಕ್ಕೆ ಕಾರಣ ಏನಂತೀರಾ ?

ಶುಭಾ: ಹೆಂಗಸರು ಬಹಳ ಬೇಗ 'ಡೊಮೆಸ್ಟಿಕೇಟ್' ಆಗಿಬಿಡ್ತಾರೆ. ಮದುವೆ-ಮಕ್ಕಳು ಇಷ್ಟರಲ್ಲೇ ತೃಪ್ತರಾಗಿ ಉದ್ಯೋಗದಲ್ಲಿ ಮುನ್ನುಗ್ಗುವ ಛಾತಿ, ಪ್ರೇರಣೆ, ಮಹತ್ವಾಕಾಂಕ್ಷೆ ಉಳಿಸಿಕೊಳ್ಳೋಲ್ಲ. ದಿನದಿನವೂ ಬದಲಾಗೊ ವಿಜ್ಞಾನ ತಂತ್ರಜ್ಞಾನದಂಥಾ ರಂಗದಲ್ಲಿ ಆರು ತಿಂಗಳು, ವರ್ಷ ಅಂತ ಹೆರಿಗೆ ರಜೆಗೆ ಹೋದರೆ, ಬಂದಾಗ ಕಾರ್ಯರಂಗದಲ್ಲಿ ಬಹಳಷ್ಟು ಬದಲಾಗಿರುತ್ತೆ. 'ಕ್ಯಾಚ್ ಅಪ್' ಮಾಡೋದು ಹೇಗೆ ? ಕೆಲಸಕ್ಕೆ ಪೂರ್ಣ ನ್ಯಾಯ ದೊರಕಿಸಿ ಕೊಡದಾಗ, ಅಂಥಾ ಕೆಲಸ ಹಿಡಿಯೋದ ತಪ್ಪು ಅನ್ನಿಸುತ್ತೆ.

ಅಚಲ: ಮನೆ–ಮಕ್ಕಳ ಹೊಣೆ ಪೂರಾ ಹೆಂಗಸರ ಮೇಲೆ ಬಿದ್ದಿರೋದೂ ಇದಕ್ಕೆ ಕಾರಣ ಅಲ್ಲವೇ ? ಆಫೀಸಿನಲ್ಲಿ ಕೆಲಸಕ್ಕೆ ನ್ಯಾಯ ಒದಗಿಸಲಿಲ್ಲ ಎಂಬ ಗಿಲ್ಟ್, ಮನೆಯಲ್ಲಿ ಉತ್ತಮ ತಾಯಿಯಾಗಲಿಲ್ಲ ಅನ್ನೋ ಇಬ್ಬಗೆಯ ಅಪರಾಧಿ ಪ್ರಜ್ಞೆಗೆ ಉದ್ಯೋಗಸ್ಥ ಮಹಿಳೆ ಒಳಗಾಗ್ತಾಳೆ. ನಾವು ಸ್ತ್ರೀಯರನ್ನು ಮಾತ್ರ ಬೆರಳಿಟ್ಟು ತೋರಿಸುತ್ತೇವೆ. ಗಂಡಸರೂ ಈ ಪರಿಸ್ಥಿತಿಗೆ ಸಾಕಷ್ಟು ಕಾರಣರು ತಾನೇ ?

ಶುಭಾ : ಅದು ನಿಜ, ಮನೆ–ಮಕ್ಕಳ ಹೊಣೆಯ ಅರ್ಧಪಾಲು ಗಂಡಸರೂ ಹೊರಬೇಕು. ಈ ಮಕ್ಕಳ ಕ್ರಷ್‌ಗಳ ಉತ್ತಮ ವ್ಯವಸ್ಥೆಯಾದರೆ ಉದ್ಯೋಗಸ್ಥ ತಾಯಂದಿರು ಎಷ್ಟೋ ಸಮಾಧಾನದಿಂದ ತಮ್ಮ ಕೆಲಸದಲ್ಲಿ ಮನಸ್ಸು ತೊಡಗಿಸಬಲ್ಲರು. ಆದರೂ ಹೆಂಗಸಿನಲ್ಲಿ ಸಾಧನೆಯ ಹುಮ್ಮಸ್ಸು ಬೇಕು. ಅಲ್ಪತೃಪ್ತರಾಗಿ ಬಿಡಬಾರದು.

ಅಚಲ : ನೀವೂ ಹೆಂಗಸರ ಉದ್ಯೋಗ, ಸಾಧನೆ, ಮಹತ್ವಾಕಾಂಕ್ಷೆ ಮದುವೆ-ಸಂಸಾರ ಕಟ್ಟಿಕೊಂಡು ಸಾಧ್ಯವಿಲ್ಲ ಅಂತಾ ನಂಬ್ತೀರಾ ?

ಶುಭಾ: ಹಾಗೇನೂ ಇಲ್ಲ. ಉದ್ಯೋಗದ ಯಶಸ್ಸಿಗೋಸ್ಕರ ಮದುವೆ ಆಗಬಾರದೆಂದೇನೂ ಇಲ್ಲ. ಆದರೆ ಸಹಕರಿಸುವ, ಅರ್ಥಮಾಡಿಕೊಳ್ಳುವ ಸಂಗಾತಿ ಅವಶ್ಯಕ.

ಅಚಲ: ಒಂದು ವೈಯಕ್ತಿಕ ಪ್ರಶ್ನೆ, ನೀವು ಅವಿವಾಹಿತರಾಗಿ ಉಳಿಯಲು ಕಾರಣ ?

ಶುಭಾ: ಅದು ನನ್ನ ಬುದ್ಧಿಪೂರ್ವಕ ನಿರ್ಧಾರ. ತುಂಬು ಕುಟುಂಬದ ಸಂಸಾರದ ಕಡೆಯವಳು ನಾನು. ಬದುಕನ್ನು ಬಹಳಷ್ಟು ಕಂಡಿದ್ದೀನಿ. ಹಾಗೆಂದೇ ನನಗೆ ಮದುವೆಯಲ್ಲಿ ಆಸಕ್ತಿ ಮೂಡಲಿಲ್ಲ. ಮೂರು ಕನ್ಯಾದಾನದ ಪುಣ್ಯ ಕಟ್ಟಿಕೊಂಡಿದ್ದೀರ. ನನ್ನ ಮದುವೆ ತಂಟೆ ಬೇಡ, ಓದಲು ಬಿಟ್ಟುಬಿಡಿ ಅಂದಿದ್ದೆ. ನಮ್ಮ ತಂದೆ ತಾಯಿ ಇಬ್ಬರೂ ನನಗೆ ಈ ವಿಷಯದಲ್ಲಿ ಬಲವಂತ ಮಾಡಲಿಲ್ಲ. ವಿಜ್ಞಾನ ಸಂಶೋಧನೆಗೆ ಮೀಸಲಾದ ನನ್ನ ವೃತ್ತಿಯಲ್ಲೇ ಅಧಿಕ ಸಮಯ ಕಳೆಯುತ್ತಿದ್ದೆ. ಅನಂತರ ಒಂದಿಷ್ಟು ವೈಯಕ್ತಿಕ ನೆಲೆಯಲ್ಲೇ ಮಾಡುವ ಸಮಾಜ ಸೇವೆ, ವಯಸ್ಸಾದ ತಾಯಿಯ ಆರೈಕೆ. ಇದೆಲ್ಲವರ ನಡುವೆ ನನಗೆ ಮದುವೆ ಬೇಕು ಅನ್ನಿಸಲಿಲ್ಲ, ಅದಕ್ಕೆ ನನ್ನಲ್ಲಿ ಸಮಯವೂ ಇಲ್ಲ. ನನ್ನ ಇಷ್ಟೆಲ್ಲ ಬಿಜಿ ಉದ್ಯೋಗ, ಆಸಕ್ತಿಗಳ ಅರ್ಥಮಾಡಿಕೊಂಡು ಸಹಕರಿಸುವಂಥವರು ಸಿಗೋದು ಕಷ್ಟ. ಆದರೆ ಖಂಡಿತಾ ಪಶ್ಚಾತ್ತಾಪವಿಲ್ಲ. ತೃಪ್ತಿಯ ತುಂಬು ಜೀವನ ಜೀವಿಸುತ್ತಾ ಇದ್ದೇನೆ. ಒಂದಿಷ್ಟು ವಿಜ್ಞಾನದಾಚೆಗೂ ಆಸಕ್ತಿಗಳಿವೆ. ವಯಸ್ಸಾದವರ ಸೇವೆ, ಭೇಟಿ ಮಾಡಿ ನಾಲ್ಕು ಸಾಂತ್ವನದ ಮಾತು ಹೇಳೋದು, ರೋಗಪೀಡಿತ ಮುದುಕರಿಗೆ ವೈದ್ಯಕೀಯ ಸಹಾಯ ಮಾಡೋದು, ಹೀಗೆ ವೈಯಕ್ತಿಕ ನೆಲೆಯಲ್ಲೇ ಒಂದಷ್ಟು ಕೆಲಸ ನಡೆದಿದೆ. ಎನ್.ಎ.ಎಲ್‌ನಲ್ಲಿ 'ಫ್ರೆಂಡ್ಸ್ ಸರ್ವಿಸ್ ಲೀಗ್' ಅಂತಾ ಪ್ರಾರಂಭಿಸಿದ್ದೇವೆ. ಕೋಡಿಹಳ್ಳಿ ಶಾಲೆ ಒಂದನ್ನು ದತ್ತು ತಗೊಂಡು ಮೇಜು, ಮಣೆ, ಪುಸ್ತಕ ಅಂತ ಒದಗಿಸಿದ್ದೇವೆ. ಹಣವಿಲ್ಲದ ಬಡವರ ಶಸ್ತ್ರಚಿಕಿತ್ಸೆಗೆ ವಂತಿಕೆ ಕೂಡಿಸೋದು, ಹೀಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ.

ಅಚಲ: ನಮ್ಮಲ್ಲಿ ಈಗಲೂ ಹುಡುಗಿಯರು ಕಲಾ ವಿಷಯಗಳನ್ನೇ ಹೆಚ್ಚು ತೆಗೆದುಕೊಳ್ತಾರೆ. ಹುಡುಗಿಯರನ್ನು ವಿಜ್ಞಾನ ತಂತ್ರಜ್ಞಾನದತ್ತ ಆಕರ್ಷಿಸಲು ಏನು ಮಾಡಬೇಕು ಅಂತೀರಾ ?

ಶುಭಾ: ಬಹಳ ಮುಖ್ಯವಾಗಿ ಶಾಲಾ ದಿನಗಳಲ್ಲೇ ವಿಜ್ಞಾನದ ಬಗ್ಗೆ ಆಸಕ್ತಿ ಕುತೂಹಲ ಬೆಳೆಸಬೇಕು. ವಿಜ್ಞಾನಿಗಳ ವಿಷಯ ತಿಳಿಸಬೇಕು.' ವಿಜ್ಞಾನಿಗಳನ್ನು

ಆಮಂತ್ರಿಸಿ ವಿದ್ಯಾರ್ಥಿಗಳೊಡನೆ ಮಾತನಾಡುವ ಅವಕಾಶ ಏರ್ಪಡಿಸಬೇಕು. ಇವೆಲ್ಲ ಸ್ಫೂರ್ತಿ ನೀಡುತ್ತವೆ. ನಮ್ಮ ಶಾಲೆ ದಿನಗಳಲ್ಲಿ ನಮ್ಮನ್ನು ಕಾರ್ಖಾನೆಗಳ ಭೇಟಿಗೆ ಕರೆದೊಯ್ಯುತ್ತಾ ಇದ್ದದ್ದು ಈಗಲೂ ನೆನಪಿದೆ. ಇವೆಲ್ಲ ಎಳೆಯ ಮನಸ್ಸಿನ ಮೇಲೆ ಅಗಾಧ ಪ್ರಭಾವ ಬೀರಬಲ್ಲವು. ಆ ರಂಗದಲ್ಲಿ ಆಸಕ್ತಿ ಮೂಡಿಸುತ್ತವೆ. ಇಂದಿನ ಶಿಕ್ಷಣ ಕ್ರಮದ ಬಗ್ಗೆ ನನಗೆ ಅಖಂಡ ಅತೃಪ್ತಿ ಇದೆ. ನರ್ಸರಿಗೂ ಸಾವಿರಗಟ್ಟಲೆ ಡೊನೇಶನ್ ಕೇಳುವ, ಪ್ರಾಥಮಿಕ ಹಂತದಲ್ಲೂ ತಿಂಗಳಿಗೆ ನೂರಾರು ರೂ ಫೀಸು ಕೇಳುತ್ತಾ, ಬರೀ ಕಲಬೆರಿಕೆ ಆಗಿದೆ, ವ್ಯಾಪಾರ ಆಗಿ ಹೋಗಿದೆ. ಐದನೇ ತರಗತಿಗೇ 'ಸೆಟ್ ಥಿಯರಿ' ಹೇಳಕೊಡ್ತಾರೆ, ಹೊರೆ ಹೊರೆ ಪುಸ್ತಕ ಹೊರೋ ಮಕ್ಕಳ ಬೆಳವಣಿಗೆ ಹೇಗೆ ಆದೀತು ? ಇನ್ನು ಕಾಲೇಜಿನಲ್ಲೋ 90% ಬಂದರೂ ಮೆರಿಟ್ ಸೀಟ್ ಸಿಗೋದು ಕಷ್ಟ. ಅಂಕಗಳನ್ನು ಎಷ್ಟೂಂತ ಗಿಟ್ಟಿಸಲು ಸಾಧ್ಯ? ಇಡೀ ಶಿಕ್ಷಣ ವ್ಯವಸ್ಥೆಯೇ ರೋಗಗ್ರಸ್ಥವಾಗಿದೆ. ನಾ ಸರಕಾರಿ ಶಾಲೆಯಲ್ಲಿ ಓದಿದ್ದು, ನನ್ನ ಶಾಲಾ ದಿನದ ಮಾಸ್ತರುಗಳನ್ನು ಈಗಲೂ ಪ್ರೀತಿಯಿಂದ ನೆನೆಸಿಕೊಳ್ಳುತ್ತೇನೆ. ಗಣಿತ ವಿಜ್ಞಾನ ಒಂದೊಂದು ವಿಷಯದಲ್ಲಿ ಎಷ್ಟು ತಿಳದಿದ್ದರೂ ಅವರು ಎಷ್ಟು ಆಸ್ತೆಯಿಂದ ನಮ್ಮಲ್ಲಿ ಆಸಕ್ತಿ ಮೂಡಿಸಿದ್ದರು. ಈಗ ಅಂಥಾ 'ಇನ್‌ಸ್ಪೈರಿಂಗ್ ಪ್ರಾಧ್ಯಾಪಕರೇ ಕಾಣುತ್ತಿಲ್ಲ. ಅದೇ ಶಾಲೆಯಲ್ಲಿ ಟ್ಯೂಶನ್ ತೆಗೆದುಕೊಳ್ಳಬೇಕು, ಅದೇ ಶಾಲೆಯಲ್ಲಿ ಪುಸ್ತಕ ಕೊಳ್ಳಬೇಕು'– ಎಲ್ಲಾ ಬರೀ ಹಣ ಮಾಡೋದಷ್ಟೇ ಆಗಿದೆ. ಭ್ರಷ್ಟತನ ಅಂತೂ ಮೇಲಿಂದ ಕೆಳಗಿನವರೆಗೂ ಹರಡಿಬಿಟ್ಟಿದೆ. ಯಾವ ಆಫೀಸಿಗೇ ಹೋಗಿ, ಏನೇ ಕೆಲಸ ಇರಲಿ ಮುಲಾಜಿಲ್ಲದೆ ಲಂಚ ಕೇಳ್ತಾರೆ. ಈ ಭ್ರಷ್ಟಾಚಾರ ನಮ್ಮ ದೇಶಾನ್ನೇ ಹಾಳು ಮಾಡ್ತಾ ಇದೆ.

ಅಚಲ: ಈ ಸಮಸ್ಯೆ ಬೃಹದಾಕಾರವಾಗಿರೋದು ನಿಜ, ಆದರೆ ಇದಕ್ಕೆ ಪರಿಹಾರವೇನೆನಿಸುತ್ತದೆ ?

ಶುಭಾ: ಮೊದಲು ಮೇಲಿನವರು ಪ್ರಾಮಾಣಿಕರಾಗಿರಬೇಕು. ಆಗಷ್ಟೆ ಕೆಳಗಿನವರಿಗೆ ಸ್ವಲ್ಪ ಭಯ ಭಕ್ತಿ ಮೂಡೋದು. ನೋಡಿ ನಮ್ಮಲ್ಲಿ ಇಷ್ಟೆಲ್ಲ ಜನಸಂಖ್ಯೆ, ವಿದ್ಯೆ, ಪ್ರತಿಭೆ ಇದ್ದರೂ ಏನೂ ಮಾಡ್ತಾ ಇಲ್ಲ. ಒಂದು ಎಲೆಕ್ಟ್ರಾನಿಕ್ ಚಿಪ್, ಒಂದು ಆಪ್–ಆಂಪ್, ಒಂದು ಕಲರ್ ಟಿ.ವಿ. ಟ್ಯೂಬ್ ಮಾಡೋಕ್ಕಾಗಿಲ್ಲ ನಮಗೆ. ಎಲ್ಲ ಆಮದು ಮಾಡಿಕೊಂಡು ಇಲ್ಲಿ ಜೋಡಿಸ್ತೇವೆ. ನಾಳೆ ಈ ಹೊರದೇಶಗಳು ರಫ್ತು ನಿಲ್ಲಿಸಿದರೆ ಏನು ಮಾಡ್ತಿರಾ ? ನಾವು ಸ್ವಾವಲಂಬಿಗಳಾಗೋದು ಯಾವಾಗ ?

ಅಚಲ: ಅದು ನಿಜ. ಶುಭಾ ಅವರೆ, ಒಂದು ಪ್ರಶ್ನೆ, ನೀವು ಸ್ತ್ರೀ ಆದ ಕಾರಣ ನಿಮ್ಮ ಕಾರ್ಯರಂಗದಲ್ಲಿ ಮಿತಿಗಳೇನಾದರೂ, ಅನುಭವ ಆಗ್ತಾ ಇದೆಯೆ ?

ಶುಭಾ: ನನ್ನ ಕೆಲಸದಲ್ಲಿ ನನಗೆ ಅಂಥಾ ಅನುಭವಗಳಾಗಿಲ್ಲ. ನನ್ನ ಸಹೋದ್ಯೋಗಿಗಳಿಗೆ, ಮೇಲ್ ಅಧಿಕಾರಿಗೆ ನನ್ನ ಕೆಲಸದ ಬಗ್ಗೆ ತುಂಬು ವಿಶ್ವಾಸ, ಗೌರವ ಇದೆ. ಆದರಾಚೆ ಒಂದಿಷ್ಟು 'ಷಾವನಿಸ್ಟಿಕ್' ಅಭಿಪ್ರಾಯಗಳು ಎಲ್ಲೆಡೆಯೂ ಇರೋದೆ. ಆದರೆ ಕೆ.ಜಿ.ಎಫ್.ನ ಬಿ.ಇ.ಎಮ್.ಎಲ್.ಗೆ ಹೋದಾಗ ಮಾತ್ರ ನನಗೆ ವಿಚಿತ್ರ ಅನುಭವವಾಯಿತು. ಅಲ್ಲಿ ಹೆಂಗಸು ಅನ್ನೋ ಕಾರಣಕ್ಕೆ ನನ್ನ ಒಳಬಿಡಲು ನಿರಾಕರಿಸಿದರು. ಕೆಲಸ ಮಾಡುವ ಪುರುಷರ ಗಮನ ಚಂಚಲವಾಗುತ್ತಂತೆ !

ಅಚಲಾ: ಅಂಥಾ ಅನುಭವ ನನಗೂ ಆಗಿದೆ. ಹೈದರಾಬಾದಿನ ಬಿ.ಎಚ್.ಇ.ಎಲ್.ನಲ್ಲಿ ಕಾರ್ಖಾನೆ ಭೇಟಿಗೆ ಹೋಗಿದ್ದ ನಮ್ಮನ್ನು, ಹುಡುಗಿಯರು ಅನ್ನೋ ಕಾರಣಕ್ಕೆ ಒಳ ಬಿಟ್ಟಿರಲಿಲ್ಲ.

ಒಂದು ಕಡೇ ಪ್ರಶ್ನೆ, ನಿಮ್ಮ ಪ್ರಶಸ್ತಿ ಬಗ್ಗೆ ನಿಮ್ಮ ಸ್ನೇಹಿತರ, ಸಹೋದ್ಯೋಗಿಗಳ ಪ್ರತಿಕ್ರಿಯೆ ಹೇಗಿತ್ತು ?

ಶುಭಾ: ಬಹಳ ಜನ ತುಂಬಾ ಸಂತೋಷದಿಂದ ಅಭಿನಂದಿಸಿದರು. ಕೆಲವು ಮಂದಿ ಮಾತ್ರ ತಟ್ಟನೆ ವಿಚಿತ್ರವಾಗಿ ವರ್ತಿಸಿದ್ದೂ, ಮಾತೂ ಸರಿಯಾಗಿ ಆಡದ್ದು ನೋವಾಯಿತು. ಕೆಲವರಂತೂ ಹತ್ತು ಸಾವಿರ ಏನು ಮಾಡ್ತೀರಾ, ಇದಕ್ಕೆ ತೆರಿಗೆ ಇಲ್ಲವಾ ? ನಿಮಗೇ ಏಕೆ ಪ್ರಶಸ್ತಿ ಬಂತು ? ಅನ್ನೊ ಎಲ್ಲ ಕರುಬುವ ಪ್ರಶ್ನೆಗಳು ಅಷ್ಟು ಹಿತ ಕೊಡಲಿಲ್ಲ.

ಅಚಲಾ: ದೊಡ್ಡ ಸಾಧನೆಯತ್ತ ನಡೆದಾಗ, ಸಣ್ಣಪುಟ್ಟ ಕಿರಿಕಿರಿಗಳನ್ನು ಎದುರಿಸಲೇಬೇಕು.

ನಮ್ಮ 'ಅಚಲ' ಪರವಾಗಿ ಹಾರ್ದಿಕ ಅಭಿನಂದನೆಗಳು.

ಶುಭಾ: ಥ್ಯಾಂಕ್ಸ್

ಸ್ಪಂದನ

ಯಾರ ಅವನತಿ ?

ಪ್ರಪಂಚದ ಮಹಾನ್ ಕಮ್ಯೂನಿಸ್ಟ್ ರಾಷ್ಟ್ರವೆನಿಸಿಕೊಂಡಿರುವ ಸೋವಿಯತ್ ರಷ್ಯಾದಲ್ಲಿ ಈಗ ಪೆರಿಸ್ಟ್ರೋಯಿಕಾದ ಭಯಂಕರ ಬಿರುಗಾಳಿ ಬೀಸತೊಡಗಿದೆ. ಅದರ ಪರಿಣಾಮ ಎಂತಹುದು ಎನ್ನುವುದನ್ನು ಇಂದು ಅಲ್ಲಿನ ಜನತೆಯ ಚಿಂತನೆ ಮತ್ತು ಕೃತಿಗಳೇ ಸಾರಿ ಹೇಳುತ್ತವೆ. ಮಹಿಳೆಯರಿಗೆ ಸಂಬಂಧಪಟ್ಟಂತೆ ಒಂದು ನಿದರ್ಶನವನ್ನಷ್ಟೇ ಇಲ್ಲಿ ಕೊಡಬಯಸುತ್ತೇನೆ.

ಲಾರಿಸಾ ಲಿಟಿಚಿವ್ಸ್ಕಯಾ ಮತ್ತು ಎಲೆನಾ ಸಮೊನೋವಾ ಇಬ್ಬರೂ ಈ ವರ್ಷದ ಸೋವಿಯತ್ ಯೂನಿಯನ್‌ನ ಸೌಂದರ್ಯರಾಣಿಯರು. ಈ ಸೌಂದರ್ಯ ರಾಣಿಯರನ್ನು ಪರಿಚಯಿಸುತ್ತಾ 'ನ್ಯೂ ಟೈಂಸ್' (ಸೋವಿಯತ್ ಸರ್ಕಾರದ ಮುಖವಾಣಿ) ತನ್ನ ಕೆಲವು ಅಭಿಪ್ರಾಯಗಳನ್ನು ಪ್ರಕಟಿಸಿದೆ. "ಕಳೆದಬಾರಿ ಸೌಂದರ್ಯ ಸ್ಪರ್ಧೆಯ ವಿಷಯ ಪ್ರಕಟವಾದಾಗ ದೇಶದುದ್ದಕ್ಕೂ ಜನ ಅಸಮಾಧಾನದ, ಸಂಶಯದ ಪ್ರತಿಕ್ರಿಯೆ ವ್ಯಕ್ತಪಡಿಸಿದರು, ಇದನ್ನು ಕೀಳು ಅಭಿರುಚಿಯೆಂದೂ, ಜನತೆಯನ್ನು ಗಂಭೀರ ಸಮಸ್ಯೆಗಳಿಂದ ದೂರ ಸೆಳೆಯುವ ಹುನ್ನಾರವೆಂದೂ ಟೀಕಿಸಿದರು. ಆದರೆ ಇಂದು ಪರಿಸ್ಥಿತಿ ಬದಲಾಗಿದೆ, ಸುಗಂಧದ ಕಾರ್ಖಾನೆ ಮತ್ತು ಜಾಹೀರಾತು ಕಾರ್ಖಾನೆಗಳು ಒಟ್ಟಾರೆಯಾಗಿ ಈ ವಿಷಯವನ್ನು ಕುರಿತು ತಮ್ಮ ಸ್ಪಷ್ಟ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅವರಿಗೆ ಸುಂದರವಾದ ಮುಖಗಳುಳ್ಳ ಹಾಗೂ ಮಾಟವಾದ ಶರೀರದ ಲಲನೆಯರು ಬೇಕಾಗಿದ್ದಾರೆ. ಆದ್ದರಿಂದ ನಿಮಗಾದರೂ ಸೌಂದರ್ಯವನ್ನು ಆರಾಧಿಸಬೇಕೆಂದು ಅನಿಸುವುದಿಲ್ಲವೇ ? ಅದರಲ್ಲೂ ಹೆಣ್ಣಿನಲ್ಲಿ ಮೈತಾಳಿರುವ ಸೌಂದರ್ಯವನ್ನು ಮೆಚ್ಚದಿದ್ದರೆ ಹೇಗೆ ?"

ಸೋವಿಯತ್ ಸಂಸ್ಕೃತಿಯಲ್ಲೂ ಹೆಣ್ಣಿನ ದೈಹಿಕ ಸೌಂದರ್ಯ ಹಾಗೂ ಆಕರ್ಷಣೆಗೆ ಹೆಚ್ಚು ಒತ್ತು ಬಿದ್ದದ್ದು ನೋಡಿದರೆ ಇದು ಏನನ್ನು ಸೂಚಿಸುತ್ತದೆ? ಸೋವಿಯತ್ ಮಹಿಳೆಯರ ಅವನತಿಯನ್ನೋ ? ಅಥವಾ ಸೋವಿಯತ್ ದೇಶ ತುಳಿದಿರುವ ಅವನತಿಯ ಮಾರ್ಗವನ್ನೋ ?

ಎರಡೂ ಎಂದರೆ ತಪ್ಪಾಗಲಾರದು !

—ಕಲ್ಯಾಣಿ. ಕೆ.

ಮಹಿಳಾ ಪೈಲಟ್

ಸೆಪ್ಟೆಂಬರ್ 17, 1989, ಭಾರತದ ವಾಯುಯಾನದ ಚರಿತ್ರೆಯಲ್ಲಿ ಪ್ರಮುಖ ದಿನ. ಕೇವಲ ಮಹಿಳೆಯರನ್ನು ಒಳಗೊಂಡ ಇಂಡಿಯನ್ ಏರ್‌ಲೈನ್ಸ್ ಬೋಯಿಂಗ್ 737 ಜೆಟ್ ವಿಮಾನವು ಬೊಂಬಾಯಿಯಿಂದ ಗೋವಾಕ್ಕೆ ಹಾರಿತು. ಕೇವಲ ಮಹಿಳೆಯರಿಂದ ನಡೆಸಲ್ಪಟ್ಟ ವಿಮಾನ ಹಾರಿದ್ದು ಇದೇ ಮೊದಲು. ಯಶಸ್ವಿಯಾಗಿ ಗೋವಾದಲ್ಲಿ ಈ ಜೆಟ್ ವಿಮಾನ ಬಂದಿಳಿದಾಗ ಸುತ್ತಲೂ ನೆರೆದಿದ್ದ ಪತ್ರಿಕಾ ವರದಿಗಾರರೂ, ಫೋಟೊಗ್ರಾಫರುಗಳನ್ನು ಕುರಿತು ವಿಮಾನದ ಕ್ಯಾಪ್ಟನ್ ಸೌದಾಮಿನಿ ದೇಶ್‌ಮುಖ್ ಹೇಳಿದ ಮಾತು ಎಲ್ಲರೂ ನೆನಪಿನಲ್ಲಿಟ್ಟುಕೊಳ್ಳಬೇಕಾದಂತದ್ದು.

"ಇಲ್ಲಿರುವ ನಾವೆಲ್ಲಾ ವೃತ್ತಿಯಿಂದ ಪೈಲಟ್‌ಗಳೇ. ಕಾಕ್‌ಪಿಟ್‌ನಲ್ಲಿ ಮಹಿಳೆ ಕುಳಿತಿದ್ದಾಳೋ ಪುರುಷ ಕೂತಿದ್ದಾನೋ ಎನ್ನುವುದು ಮುಖ್ಯವಾಗುವುದೇ ಇಲ್ಲ. ಆದರೂ ಈ ಯಾನ ವೈಶಿಷ್ಟ್ಯಪೂರ್ಣವಾದುದು ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಇಂತಹ ಯಾನಗಳು ಮುಂದೆ ಸಾಮಾನ್ಯ ಸಂಗತಿಗಳಾಗಲೆಂದು ಆಶಿಸುತ್ತೇನೆ."

ಗಗನ ಸಖಿ (ಏರ್ ಹೋಸ್ಟೆಸ್)ಯ ಹುದ್ದೆಗೆ ಆಕರ್ಷಿತರಾಗುತ್ತಿದ್ದ ಮಹಿಳೆಯರು ಇಂದು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಪೈಲಟ್ ಹುದ್ದೆಗೆ ಧುಮುಕುತ್ತಿದ್ದಾರೆ. ಕ್ಯಾಪ್ಟನ್ ಸೌದಾಮಿನಿ ದೇಶ್‌ಮುಖ್ ಜೆಟ್ ವಿಮಾನದಲ್ಲಿ ಯಾನ ಮಾಡಲು ಅನುಮತಿ ಪಡೆದ ಮೊದಲ ಮಹಿಳೆ. ಅಂತರರಾಷ್ಟ್ರೀಯ ಮಹಿಳಾ ಪೈಲೆಟ್‌ಗಳ ಸಂಘದ ಭಾರತೀಯ ಶಾಖೆಯ ಸ್ಥಾಪಕ ಸದಸ್ಯೆಯೂ ಹೌದು. ಸೆಪ್ಟೆಂಬರ್‌ನಲ್ಲಿ ಬೊಂಬಾಯಿ–ಗೋವಾಗಳ ನಡುವಿನ ಮಹಿಳಾ ಯಾನವನ್ನು ಕುರಿತು ಅವಳು ಹೇಳಿದ್ದು: "ಇದು ಸಂತಸದ ವಿಷಯವೇನೋ ಹೌದು. ಆದರೆ ಭಾವೋದ್ರೇಕದ ವಿಷಯವಂತೂ ಅಲ್ಲ." ಹೆಣ್ಣೆಂಬ ಕಾರಣಕ್ಕಾಗಿಯೇ ಅವಳ ಎಲ್ಲಾ ಕೃತಿಯನ್ನು ವೈಭವೀಕರಿಸುವ ಸಮೂಹ ಮಾಧ್ಯಮಗಳ ಧೋರಣೆ ಇನ್ನಾದರೂ ಬದಲಾಗಬೇಕಲ್ಲ !

—ಸುಮಿತ್ರಾ

6ನೇ ಪುಟದಿಂದ

ಸುಂದರ ಮಿಶ್ರಣ ಆಗಿತ್ತು. ಜೀವನದ ಒಂದೊಂದು ಕಟು ಸತ್ಯಕ್ಕೂ ತನ್ನ ಮಾಯೆಯ ಮುಸುಕನ್ನು ಹೊದಿಸಿ ಅದನ್ನು ರಹಸ್ಯವಾಗಿ ಮಾಡುವ ಚಂದ್ರಮನೂ ಆಗಸದಲ್ಲಿ ನಗುತ್ತಲೇ ಇರುತ್ತಾನೆ" ಅಲ್ಲವೆ ?

ಕುಂಟಬುಲಾರಿಗೆ ಬಸಂತಿಯನ್ನು ಕಟ್ಟಿ ಹಾಕುವ ಅವಳ ಅಪ್ಪನ ಪ್ರಯತ್ನಗಳು ಒಂದೆಡೆ ಸಾಗಿದ್ದರೆ, ದೀನೂವಿನ ಬಗ್ಗೆ ಅವಳ ಪ್ರೇಮ ಹೆಚ್ಚುತ್ತಲೇ ಹೋಗುವುದು ಮತ್ತೊಂದು ತುದಿಯಲ್ಲಿ. ಆದರೆ ದೀನೂಗೆ ಮಾತ್ರ ಬಸಂತಿಯ ದೇಹದಿಂದ ಹೊರ ಸೂಸುವ ಮಾದಕ ಸುಗಂಧವೇ ಹೆಚ್ಚು. ಆ ಕಾರಣಕ್ಕೆ ಅವನಿಗೆ ಬಸಂತಿಯ ಹುಚ್ಚು ಹಿಡಿದದ್ದು. ಈಗಾಗಲೇ ಮದುವೆಯಾಗಿರುವ ಅವನಿಗ ತನ್ನ ಸ್ಥಿತಿಯನ್ನಾಗಲೀ, ಬಸಂತಿಯ ಪರಿಸ್ಥಿತಿಯನ್ನಾಗಲೀ ಸರಿಯಾಗಿ ಅರ್ಥಮಾಡಿಕೊಳ್ಳಲು ಅಸಮರ್ಥನಾಗಿದ್ದ. ಬೇಕಾದಾಗ ಸುಲಭವಾಗಿ ಸಿಕ್ಕುವವಳು ಬಸಂತಿ. ಆದಕ್ಕಿಂತ ಇನ್ನೇನು ಅವನಿಗೆ ಬೇಡವಾಗಿತ್ತು. ಮುಂದೆ ಕೆಲಸಮಾಡಿ ನಾಲ್ಕು ಕಾಸು ಸಂಪಾದಿಸಿ ತರುತ್ತಾಳೆ. ತನ್ನ ಎದೆ ಮೇಲೆ ಏನೂ ಬೀಳುವುದಿಲ್ಲ ಎಂಬುದೂ ಅವನಿಗೆ ಪ್ರಯೋಜನಕಾರಿ. ಆದರೆ ಅವಳು ದೀನೂವಿನ ಕೋಣೆಯಲ್ಲಿ ವಾಸವಾಗಿದ್ದ ಕಾರಣ ಅವನ ಕೆಲಸ ಹೋಗುತ್ತದೆ. ಮತ್ತೆ ಮರಳಿ ಹಳ್ಳಿಗೆ ಹೋಗುವ ಯೋಚನೆ ಮಾಡುತ್ತಾನೆ. ಅಲ್ಲಿ ಹೆಂಡತಿ ಇದ್ದಾಳೆ. ಬಸಂತಿಯನ್ನು ಬರಡು ಎಂಬುವನಿಗೆ ಮಾರಿ ಹಳ್ಳಿಗೆ ಹಿಂತಿರುಗುತ್ತಾನೆ. ಬರಡುವಿನಿಂದ ತಪ್ಪಿಸಿಕೊಂಡು ಬರುವ ಸಾಹಸಮಯ ಕತೆ ಇಲ್ಲಿ ಆಕರ್ಷಕವಾಗಿ ಮೂಡಿ ಬಂದಿದೆ.

ಶ್ಯಾಮಾ ತಾಯಿಯ ಮನೆಗೆ ಅವಳು ಬಂದಾಗ ಈ ಹಿಂದೆ ಬಸಂತಿ ಕುಣಿದು ಕುಪ್ಪಳಿಸುತ್ತಿದ್ದಳು, ತಮಾಷೆ ಮಾಡುತ್ತಿದ್ದಳು. ಆದರೆ ಕೆಲವೇ ತಿಂಗಳಲ್ಲಿ ಅವಳ ಬಾಲ್ಯ ಮುಗಿದು ಹೋದಂತಿದೆ. ಅಸಹಾಯಕತೆಯಲ್ಲಿ ಅವ್ವ ಒಡ್ಡಿದ ಬಲೆಗೇ ಮತ್ತೆ ಬೀಳುತ್ತಾಳೆ. ಕುಂಟ ದರ್ಜಿಯ ಮನೆಯಲ್ಲಿ ಅವಳ ಆರ್ಥಿಕ ಬೇಡಿಕೆಗಳು ಎಲ್ಲ ಈಡೇರಿದರೂ ಸಹ ತಾನು ಪ್ರೀತಿಸಿದ್ದ ದೀನೂ ಬಳಿಗೆ ವಾಪಸ್ಸಾಗುವ ತವಕ ಅವಳಲ್ಲಿ ಹೆಚ್ಚುತ್ತದೆ. ಮತ್ತೊಂದು ಯಾವಾಗಾದರೂ ತನ್ನ ಪ್ರಿಯಕರ ಗೋಚರಿಸುತ್ತಾನೆ ಎಂದೇ ಅವಳು ನಿರೀಕ್ಷಿಸಿರುತ್ತಾಳೆ. ಹೀಗೆಯೇ ದೀನು ಸಿಕ್ಕಾಗ ಅವನ ಹಿಂದೆಯೇ ಗಂಡ–ಸಂಪತ್ತು ಎಲ್ಲ ಬಿಟ್ಟುಕೊಟ್ಟು ಮಗನನ್ನೆತ್ತಿಕೊಂಡು ದೀನೂನೊಂದಿಗೆ ಹಳ್ಳಿಗೆ ಹೋಗಿ ಬಿಡುತ್ತಾಳೆ. ಅಲ್ಲಿ ರುಕ್ಕಿಯು ಎಲ್ಲ ತಾತ್ಸಾರದ ಮಧ್ಯೆಯೂ ನಗುನಗುತ್ತಲೇ ಬದುಕುತ್ತಾಳೆ. ದುಡಿಮೆಯಿಲ್ಲದ ಮನೆಗೆ ತನ್ನ ದುಡಿಮೆಯಿಂದ ಮತ್ತೆ ಲವಲವಿಕೆ ಮೂಡಿಸುತ್ತಾಳೆ. ದೀನೂವಂತೂ ಅಸಹಾಯಕ. ರುಕ್ಕಿ ಅಸಹನೆಯಿಂದ ಕುದಿಯುತ್ತಾಳೆ. ಬಹಳ ದಿನಗಳ ಕಾಲ ಮಕ್ಕಳಾಗಿರುವುದಿಲ್ಲ. ಎಲ್ಲ ಅಂಧಶ್ರದ್ಧೆಗಳಿಗೂ ರುಕ್ಕಿ ತಲೆಬಾಗುತ್ತಾಳೆ. ಕೊನೆಗೊಮ್ಮೆ ರುಕ್ಕಿಗೂ ಮಗುವಾದಾಗ ಬಸಂತಿಯ ಬಗ್ಗೆ ಅವಳ ಅಸಹನೆ ಹೆಚ್ಚುತ್ತದೆ.

ಕಪ್ಪು ಬಣ್ಣದಲ್ಲಿ ರುಕ್ಕಿಯ ಮಗು ವಾಂತಿ ಮಾಡಿಕೊಳ್ಳುತ್ತಿದ್ದಾಗ ದೇವರನ್ನೇ ನಂಬಿ ಮಗು ಬಲಿಯಾಗುತ್ತಿರುವುದನ್ನು ಸಹಿಸದ ಬಸಂತಿ ಅದನ್ನೆತ್ತಿಕೊಂಡು ಓಡಿ ಹೋಗುತ್ತಾಳೆ. ತನ್ನ ಮಗಳನ್ನು ಸಾಯಿಸಲೆಂದೇ ಬಸಂತಿ ತೆಗೆದುಕೊಂಡು ಹೋಗಿದ್ದಾಳೆಂದು ತಪ್ಪು ತಿಳಿಯುವ ರುಕ್ಕಿ ಹಿಂದೆಯೇ ಬೆನ್ನಟ್ಟುತ್ತಾಳೆ. ಅಲ್ಲಿ ನೋಡಿದರೆ ಡಾಕ್ಟರೊಬ್ಬರನ್ನು ಮಗು ಉಳಿಸೆಂದು ಅತ್ಯಂತ ದೈನ್ಯವಾಗಿ ಬಸಂತಿ ಬೇಡಿಕೊಳ್ಳುತ್ತಿರುತ್ತಾಳೆ. ಬಸಂತಿ ತನ್ನ ಜೀವನದಲ್ಲಿ ಸದಾ ಬಂದೆರಗುವ ಬರಸಿಡಿಲುಗಳ ಮಧ್ಯೆಯೂ ಧೃತಿಗೆಡದ ಜೀವನ ಪ್ರೀತಿಯನ್ನು ಉಳಿಸಿಕೊಂಡಿದ್ದಾಳೆ. ಬಸಂತಿಯ ಮೂಲಕ ಕೆಳವರ್ಗದ ಮಹಿಳೆಯ ಬದುಕಿನ ಶ್ರದ್ಧೆಯನ್ನು ಸಾಹನಿ ಮನಮಿಡಿಯುವಂತೆ ಚಿತ್ರಿಸಿದ್ದಾರೆ. ಬದುಕಿನ ಗಾಢ ಅನುಭವವಿರುವ ಲೇಖಕ ಮಾತ್ರ ಇಂತಹ ಕಲೆಯ ಜಾದುಗಾರಿಕೆ ಹೆಣೆಯಬಲ್ಲ.

“ಮನುಷ್ಯ ಕಷ್ಟ ಕಾರ್ಪಣ್ಯಗಳಿಂದ ಹೆದರುವುದಿಲ್ಲ. ಪ್ರೀತಿ, ಆತ್ಮೀಯತೆಗಳು ದೊರೆತರೆ ಸಾಕು ಅವನು ಎಂತಹ ಸಂಕಟ, ಆತಂಕಗಳ ಹರದಾರಿಯನ್ನು ದಾಟಬಲ್ಲ” ಎಂಬ ಆಶಯ ಕತೆಯಲ್ಲಿ ಅಂತರ್ಗತವಾಗಿದ್ದು ಹೋರಾಟಮಯ ಬದುಕನ್ನು ಅರ್ಥಪೂರ್ಣವಾಗಿಸುತ್ತದೆ.

ಶಾರದಾ ಸ್ವಾಮಿ ಹಾಗೂ ಡಾ॥ ಎಸ್. ಎಂ. ರಾಮಚಂದ್ರಸ್ವಾಮಿ ಹಿಂದಿಯ ಈ ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಿ ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

“ಅಯ್ಯೋ, ಬನ್ನಿ ಅಂದರೆ! ವಾಪಸ್ಸು ಬನ್ನಿ ಅಂದರೆ! ! ಸಾಕು, ಪಾಪಸ್ಸು ಬಂದು ಬಿಡಿ ! ! !” ಎಂದು ಚೌಧರಿ ಹೆಂಡತಿ ಗಂಡನನ್ನುದ್ದೇಶಿಸಿ ಒಮ್ಮೆ ಕೂಗುತ್ತಾಳೆ. ಆದರೆ ಕೆಳವರ್ಗದ ಮಹಿಳೆ ಹೀಗೆ ಗಂಡನನ್ನು ಬಹುವಚನದಲ್ಲಿ ಮಾತನಾಡಿಸುವುದು ತುಂಬಾ ವಿರಳ. ಅನುವಾದ ಕೆಲವು ಕಡೆ ಇಷ್ಟೊಂದು ಲಿಟರಲ್ ಆಗಿರಬಾರದಿತ್ತು. ○

ಹೀಗೊಂದು ವರದಕ್ಷಿಣೆಯ ಸಾವು...

ಮಿನರ್ವ ಮಿಲ್ ಕಾರ್ಖಾನೆಯ ಕಾರ್ಮಿಕ ಅಶೋಕ್‌ನ ಪತ್ನಿ, 21ರ ತರುಣಿ ಜಿ. ಕಣ್ಣಗಿ ಆಗಸ್ಟ್ 5ರಂದು ಗಂಡನ ಮನೆಯಲ್ಲಿ ಸತ್ತಿದ್ದಾಳೆ.

ಸಾಯುವಾಗ ಕಣ್ಣಗಿಗೆ ಅಶೋಕನೊಡನೆ ವಿವಾಹವಾಗಿ ಕೇವಲ ಹದಿನಾಲ್ಕು ತಿಂಗಳುಗಳಾಗಿದ್ದವು ಅಷ್ಟೆ. ಮದುವೆಯನ್ನು ಅದ್ದೂರಿಯಾಗಿ ಮಾಡಿಕೊಟ್ಟದ್ದಲ್ಲದೆ, 15,000 ರೂಗಳನ್ನು 5 ಸವರನ್ ಚಿನ್ನವನ್ನೂ ಕೊಟ್ಟಿದ್ದರು. ಈ ವರೋಪಚಾರ ಸಾಲದೆಂಬಂತೆ ವರ್ಷದಲ್ಲಿ ಹಬ್ಬದ ಸಂದರ್ಭಗಳಲ್ಲೆಲ್ಲಾ ಉಡುಗೊರೆಯ ಉಪಚಾರವೂ ನಡೆಯುತ್ತಿತ್ತು, ಅತ್ತೆ, ಮಾವನ ಪೈಶಾಚಿಕ ಆಸೆಗೆ ಈ ಯಾವುವೂ ತೃಪ್ತಿಪಡಿಸಲಾಗಲಿಲ್ಲ. ಕಡೆಗೆ ಮತ್ತೆ ಮತ್ತೆ ಹೆಚ್ಚಿನ ಹಣಕ್ಕಾಗಿ ಪೀಡಿಸಲು ಪ್ರಾರಂಭಿಸಿದರು. ಹಣದ ತಾಪತ್ರಯದಲ್ಲಿ ಸೋತ ತಂದೆ ತಾನೇ ಏನು ಮಾಡಬಲ್ಲ?

ಮಗಳಿಗೆ ಟಿ.ಸಿ.ಎಚ್. ತರಬೇತಿ ಕೊಡಿಸಿ ಎಂದು ಅತ್ತೆ ಮನೆಯವರು ಅಪರೂಪದ ಬೇಡಿಕೆ ಇಟ್ಟರು. ಕಷ್ಟವಾದರೂ ಕಣ್ಣಗಿಯ ತಂದೆ ಗಣಪತಿ ಈ ಬೇಡಿಕೆಯನ್ನು ನೆರವೇರಿಸಿದರು. ಟಿ.ಸಿ.ಎಚ್. ತರಬೇತಿಗೆ ಕಾಲೇಜಿಗೆ ಹೋಗುತ್ತಿದ್ದ ಕಣ್ಣಗಿಗೆ ಪರೀಕ್ಷೆ ಇನ್ನೇನು 18ದಿನಗಳವರೆಗೆ ಇದೆ ಎನ್ನುವಾಗ ಹೋಗದಂತೆ ತಡೆದರು. ಈ ವಿಷಯದಲ್ಲಿ ಅವರ ಮನಸ್ಸು ಬದಲಾಯಿಸಲು ಯಾರ ಒತ್ತಾಯವೂ ಕೆಲಸ ಮಾಡಲಿಲ್ಲ.

ಆಗಸ್ಟ್ 5ರಂದು ಬೆಳಿಗ್ಗೆ ಕಣ್ಣಗಿ ಸತ್ತಳು. ಹೇಗೆ? ನೇಣು ಹಾಕಿಕೊಂಡು. ಕುತೂಹಲದ ಸಂಗತಿಯೆಂದರೆ, ಕಣ್ಣಗಿ ನೇಣು ಹಾಕಿಕೊಂಡು ಸತ್ತ ಸಂಗತಿಯನ್ನು ಕೂಡಲೇ ಅವಳ ತಂದೆ ತಾಯಿಗಳಿಗಾಗಲೀ, ಪಕ್ಕದ ಬೀದಿಯಲ್ಲಿಯೇ ವಾಸಿಸುತ್ತಿರುವ ಚಿಕ್ಕಪ್ಪನಿಗಾಗಲೀ ತಿಳಿಸಿಲ್ಲ. ಯಾರೋ ಮೂರನೆಯವರ ಮೂಲಕ ವಿಷಯ ತಿಳಿದು ಧಾವಿಸಿದ ಅವಳ ತಂದೆ, ತಾಯಿ, ಬಂಧುಗಳು ನಡೆದ ಘಟನೆಯಿಂದ ದುಃಖಗೊಂಡು ಕೂಡಲೇ ಪೋಲಿಸ್ ಕಂಪ್ಲೇಂಟ್ ಕೊಟ್ಟರು. ನಂತರ ಪೋಲೀಸರು ಹುಡುಗಿಯ ಗಂಡ ಮತ್ತು ತಂದೆಯನ್ನು ಬಂಧಿಸಿ ಜಾಮೀನಿನ ಮೇಲೆ ಬಿಟ್ಟರು.

ಈ ವರದಕ್ಷಿಣೆಯ ಸಾವನ್ನು ಪ್ರತಿಭಟಿಸಿ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ, ಶ್ರೀರಾಮಪುರಂ ಶಾಖೆಯು ಪ್ರತಿಭಟನಾ ಮೆರವಣಿಗೆಯನ್ನು ನಂತರ ವರದಕ್ಷಿಣಾ ವಿರೋಧಿ ವಿಚಾರ ಸಂಕಿರಣವನ್ನೂ ಏರ್ಪಡಿಸಿತು.

ವರದಿ : ಶಾರದಾ

Reg. No. MAG (5) PRB. DECL 039/85-87
BOOK-POST/PERIODICALS

To,

If undelivered please return to :
Jagruthi Mahila Adhyayana Kendra
26, 1st Main Road, Vyalikaval
Bangalore–560 003